ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2292
2. ಸದಸ್ಯರ ಹೆಸರು : ಶ್ರೀಮತಿ ಸೌಮ್ಯರೆಡ್ಡಿ (ಜಯನಗರ)
3. ಉತ್ತರಿಸುವ ದಿನಾಂಕ : 23-03-2021
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಜಯನಗರ ಮತಕ್ಷೇತ್ರದ ಬಿ.ಬಿ.ಎಂ.ಪಿ ವಾರ್ಡ್-168ರ ಹಿಂಬದಿಯಲ್ಲಿ ಬ್ಯಾಸ್ಕೆಟ್ ಬಾಲ್ ಮೈದಾನದ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಕೈಗೊಂಡ ಕ್ರಮವೇನು;	ಜಯನಗರ ಮತಕ್ಷೇತ್ರದ ಬಿ.ಬಿ.ಎಂ.ಪಿ ವಾರ್ಡ್-168ರ ಹಿಂಬದಿಯಲ್ಲಿ ಬ್ಯಾಸ್ಕೆಟ್ ಬಾಲ್ ಮೈದಾನದ ಅಭಿವೃದ್ಧಿಗೆ ಯಾವುದೇ ಅನುದಾನ ಅನುಮೋದನೆಯಾಗಿರುವುದಿಲ್ಲ. ಮುಂದೆ ಅನುದಾನ ಲಭ್ಯತೆಯನುಸಾರ ಸದರಿ ಬ್ಯಾಸ್ಕೆಟ್ ಬಾಲ್ ಮೈದಾನದ ಅಭಿವೃದ್ಧಿ ಕೈಗೊಳ್ಳಲು ನಿಯಮಾನುಸಾರ ಕ್ರಮವಹಿಸಲಾಗುವುದು.
ಆ	ಈ ಮತ ಕ್ಷೇತ್ರದ ಕೇಂದ್ರ ಯೋಜನೆ ಅಡಿಯಲ್ಲಿ ಬ್ಯಾಲೆನ್ಸ್ ರಸ್ತೆಗಳ ಕಾಂಕ್ರಿಟಿಂಗ್ (ವೈಟ್ ಟಾಪಿಂಗ್) ಹಾನಿಗೆ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಿಬಿಎಂಪಿ ಆಯವ್ಯಯದಲ್ಲಿ ಅನುದಾನ ಹಂಚಿಕೆ ಮಾಡಲಾಗಿದ್ದರೂ ಸಹ ಕಾಮಗಾರಿ ಪೂರ್ಣಗೊಂಡಿಲ್ಲದೆ, ಇರುವುದಕ್ಕೆ ಕಾರಣಗಳೇನು:	ಜಯನಗರ ವಾಣಿಜ್ಯ ಸಂಕೀರ್ಣದ ಸುತ್ತಮುತ್ತಲಿನ ರಸ್ತೆಗಳಾದ 27ನೇ ಅಡ್ಡರಸ್ತೆ ಮತ್ತು 30ನೇ ಅಡ್ಡರಸ್ತೆಯಲ್ಲಿ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಈಗಾಗಲೇ ಮುಕ್ತಗೊಳಿಸಲಾಗಿರುತ್ತದೆ. ಮುಂದುವರೆದು, 9ನೇ ಮುಖ್ಯರಸ್ತೆ ಮತ್ತು 10ನೇ ಮುಖ್ಯರಸ್ತೆಯಲ್ಲಿ ಭೌತಿಕ ಕೆಲಸಗಳನ್ನು ಪೂರ್ಣಗೊಳಿಸಿದ್ದು, ಉಳಿದಿರುವ ಕೆಲಸಗಳಾದ ಒಂದು ಭಾಗದ 400.00 ಮೀಟರ್ ಉದ್ದದ ಪಾದಚಾರಿ ಮಾರ್ಗದ ಕಾರ್ಯಗಳನ್ನು ದಿನಾಂಕ: 15-05-2021 ರೊಳಗಾಗಿ ಪೂರ್ಣಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 2019-20ನೇ ಮತ್ತು 2020-21ನೇ ಸಾಲಿನ ಸರ್ಕಾರದ ಅನುದಾನದಲ್ಲಿ ಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅನುಮೋದನೆ ನೀಡಲಾಗಿರುವ ಒಟ್ಟು 6 ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಕಾಮಗಾರಿಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಇ	ಪ್ರಮುಖ ರಸ್ತೆಗಳ ಅಗಲೀಕರಣ ಕಾಮಗಾರಿಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು	ಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಪ್ರಮುಖ ರಸ್ತೆಗಳ ಅಗಲೀಕರಣಕ್ಕೆ ಸಂಬಂಧಿಸಿದ ಯಾವುದೇ ಯೋಜನೆಯು ಇರುವುದಿಲ್ಲ.
ಈ	ಜಯನಗರ ಕ್ಷೇತ್ರದ ವಾರ್ಡ್ 168 ರಲ್ಲಿ ಟೆಂಡರ್ ಖಚಿತ ರಸ್ತೆ / ಫುಟ್‌ಪಾತ್ ಸೌಲಭ್ಯವನ್ನು ಯಾವಾಗ ಒದಗಿಸಲಾಗುವುದು.	2017-18ನೇ ಸಾಲಿನ ಸರ್ಕಾರದ ಅನುದಾನದಲ್ಲಿ ಅನುಮೋದನೆಯಾಗಿದ್ದ Non Motorized Transit (NMT) ಯೋಜನೆಯಡಿ ಜಯನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ-168ರ ವ್ಯಾಪ್ತಿಯ 33ನೇ ಅಡ್ಡರಸ್ತೆ, 36ನೇ ಅಡ್ಡರಸ್ತೆ, 38ನೇ ಅಡ್ಡರಸ್ತೆ, 18ನೇ ಮುಖ್ಯರಸ್ತೆ ಮತ್ತು 9ನೇ

		ಮುಖ್ಯರಸ್ತೆಗಳಲ್ಲಿ ಒಟ್ಟು ಸುಮಾರು 2.73 ಕಿ.ಮೀ ಉದ್ದಕ್ಕೆ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲಾಗಿದೆ. ಜಯನಗರ ಕ್ಷೇತ್ರದ ವ್ಯಾಪ್ತಿಯಲ್ಲಿನ ವಾರ್ಡ್ ಸಂಖ್ಯೆ: 168ರ 24ನೇ ಮುಖ್ಯರಸ್ತೆಯಲ್ಲಿ ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವ ಪಾದಚಾರಿ ಮಾರ್ಗದ ಉಳಿದಿರುವ ಕೆಲಸಗಳಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನವನ್ನು 2021-22ನೇ ಸಾಲಿನ ಪಾಲಿಕೆಯ ಅನುದಾನದಲ್ಲಿ ಕಲ್ಪಿಸಿಕೊಳ್ಳಲು ಅನುಮೋದನೆಗಾಗಿ ಕ್ರಮ ಕೈಗೊಂಡಿದ್ದು, ಅನುದಾನ ಬಿಡುಗಡೆ ಆದ ನಂತರ ಉಳಿದಿರುವ ಎಲ್ಲಾ ಕೆಲಸಗಳನ್ನು ಅತೀ ಶೀಘ್ರವಾಗಿ ಪೂರ್ಣಗೊಳಿಸಿ ಅನುಷ್ಠಾನಗೊಳಿಸಲಾಗುತ್ತದೆ.
ಉ	ಜಯನಗರದ ವಿವಿಧ ಸ್ಥಳಗಳಲ್ಲಿ ಬೀದಿ ದೀಪಗಳಿಗೆ ಎಲ್.ಇ.ಡಿ ದೀಪಗಳನ್ನು ಅಳವಡಿಸುವ ಕೆಲಸ ಯಾವಾಗ ಕೈಗೊಳ್ಳಲಾಗುವುದು;	ಸಾರ್ವಜನಿಕರ ಸುರಕ್ಷತೆ ಮತ್ತು ಹಿತದೃಷ್ಠಿಯಿಂದ ಟೆಂಡರ್ ಮೂಲಕ ಗುತ್ತಿಗೆದಾರರನ್ನು ನಿಯೋಜಿಸಿ ಹಾಲಿ ಇರುವ ಬೀದಿ ದೀಪಗಳ ದುರಸ್ಥಿ ಮತ್ತು ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ 198 ವಾರ್ಡ್‌ಗಳಲ್ಲಿರುವ ಸರಿ ಸುಮಾರು 4.85 ಲಕ್ಷ ಬೀದಿ ದೀಪಗಳ ಬಳಕೆಯಿಂದ ಶೇ.85.50 ರಷ್ಟು ವಿದ್ಯುಚ್ಛಕ್ತಿ ಉಳಿತಾಯಗೊಳಿಸುವ ESCO ಮಾದರಿಯಲ್ಲಿ LED ದೀಪಗಳನ್ನಾಗಿ ಪರಿವರ್ತಿಸುವ ಯೋಜನೆಯನ್ನು 05 ಹಂತಗಳಲ್ಲಿ ಕೈಗೊಂಡು ಅನುಷ್ಠಾನಗೊಳಿಸಬೇಕಾಗಿರುತ್ತದೆ. ದಿನಾಂಕ: 18-06-2020 ರಿಂದ ಮೊದಲನೇ ಹಂತದಲ್ಲಿ (Phase-1) M/s. BSPL ರವರು ಒಂದು ಲಕ್ಷ ಬೀದಿ ದೀಪಗಳ ಸರ್ವೇ ಕಾರ್ಯವನ್ನು ದಾಸರಹಳ್ಳಿ, ರಾಜರಾಜೇಶ್ವರಿ ನಗರ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿ ಪೂರ್ಣಗೊಳಿಸಿದ್ದು, ಎರಡನೇ ಹಂತದ (Phase 2) ಸರ್ವೇ ಕಾರ್ಯವನ್ನು ದಕ್ಷಿಣ ವಲಯದಲ್ಲಿ ಪ್ರಾರಂಭಿಸಿರುತ್ತಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿನ ಎಲ್ಲಾ ಬೀದಿ ದೀಪಗಳನ್ನು 30 ತಿಂಗಳೊಳಗೆ LED ದೀಪಗಳನ್ನಾಗಿ ಪರಿವರ್ತನೆಗೊಳಿಸಿ ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.
ಊ	ಫುಟ್‌ಪಾತ್ ಅತಿಕ್ರಮಣವನ್ನು ತಪ್ಪಿಸಲು ಅಗತ್ಯವಿರುವ ಕಡೆಗಳಲ್ಲಾ ಹಾಕಿಂಗ್ ವಲಯಗಳನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಫುಟ್‌ಪಾತ್ ಅತಿಕ್ರಮಣವನ್ನು ತಡೆಯಲು ವಾರ್ಡ್ / ಉಪ ವಿಭಾಗ / ವಿಭಾಗದ ಅಧಿಕಾರಿಗಳಿಂದ ಆಗಾಗ್ಗೆ ಫುಟ್‌ಪಾತ್ ತೆರವು ಕಾರ್ಯಾಚರಣೆಯನ್ನು ಹಮ್ಮಿಕೊಂಡು ಕ್ರಮವಹಿಸಲಾಗುತ್ತಿದೆ. ಹಾಕಿಂಗ್ ವಲಯಗಳನ್ನು ಸ್ಥಾಪಿಸುವ ಅವಶ್ಯಕತೆ ಇದ್ದು, ಈ ಕಾರ್ಯಕ್ಕೆ ಅವಶ್ಯವಿರುವ ಸ್ಥಳಗಳನ್ನು ಗುರುತಿಸಬೇಕಾಗಿರುತ್ತದೆ.

ಸಂಖ್ಯೆ: ನಅಇ 93 ಎಂಎಸ್‌ವೈ 2021 (ಇ)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 22 ಕ್ಕೆ ಅನುಬಂಧ-1

ಅನುಬಂಧ-1

Name of Work: Improvements and asphalting to selected Arterial, Sub arterial and other connecting roads in Jayanagar Assembly Constituency. (Package No.2018-19 S1)	
Sl. No.	Roads
1	Asphalting to 9th main road from 30th cross to 46th cross in Jayanagara
2	Asphalting to 28th main road from 30th cross to 36th cross in jayanagara
3	Asphalting to 36th cross from 16th main to Banneragatta Road
4	Comprehensive Development of 30th cross from 4th main to 9th main including asphalting to Diagonal Road and Swagath Theater Road in Jayanagar Constituency
5	Comprehensive Development of 16th main Road Jayanagara
6	Comprehensive Development of 27th cross road from Kanakapura Main to 11th main Road Jayanagara

Assistant Executive Engineer
Road Infrastructure - South
Bruhat Bangalore Mahanagara Palike

Executive Engineer
Road Infrastructure - South
Bruhat Bangalore Mahanagara Palike

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2273
2. ಸದಸ್ಯರ ಹೆಸರು : ಶ್ರೀ ಸುರೇಶ್ ಗೌಡ
3. ಉತ್ತರಿಸಬೇಕಾದ ದಿನಾಂಕ : 23-03-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಗುಡ್ಡೆಹೊಸಹಳ್ಳಿಯಿಂದ ಕೆ.ಆರ್.ಪೇಟೆ, ನಾಗಮಂಗಲ, ಚೆನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಗುತ್ತಿಗೆಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ;	ಹೇಮಾವತಿ ನದಿಯಿಂದ ಗುಡ್ಡೇಹೊಸಹಳ್ಳಿ ಗ್ರಾಮದ ಬಳಿಯಿಂದ ಲಿಫ್ಟ್ ಮುಖೇನ 310.29 ಎಂ.ಸಿ.ಎಫ್.ಟಿ. ನೀರನ್ನು ಎತ್ತಿ ಕೆ.ಆರ್.ಪೇಟೆ, ನಾಗಮಂಗಲ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಕಾಮಗಾರಿಯನ್ನು ಟೆಂಡರ್ ಮುಖಾಂತರ ಮೆ॥ ಶ್ರೀನಿವಾಸ್ ಕನ್ಸ್‌ಟ್ರಕ್ಷನ್ಸ್ ಇಂಡಿಯಾ ಪ್ರೈ. ಲಿ., ಬಳ್ಳಾರಿ, ರವರಿಗೆ ವಹಿಸಿಕೊಡಲಾಗಿದೆ.
ಆ	ಗುತ್ತಿಗೆದಾರರು ಹಾಗೂ ಕಾವೇರಿ ನೀರಾವರಿ ನಿಗಮದ ನಡುವೆ ಆಗಿರುವ ಒಪ್ಪಂದದ ಪ್ರತಿಯನ್ನು ನೀಡುವುದು;	ಗುತ್ತಿಗೆದಾರರು ಹಾಗೂ ಕಾವೇರಿ ನೀರಾವರಿ ನಿಗಮದ ನಡುವೆ ಆಗಿರುವ ಒಪ್ಪಂದದ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಇ	ಯಾವ ಕಾಲಮಿತಿಯೊಳಗಾಗಿ ಈ ಯೋಜನೆಯನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ; ಪ್ರಸ್ತುತ ಈ ಯೋಜನೆಯು ಯಾವ ಹಂತದಲ್ಲಿದೆ;	ಗುತ್ತಿಗೆ ಕರಾರಿನಂತೆ 24 ತಿಂಗಳ ಗುತ್ತಿಗೆ ಅವಧಿಯನ್ನು ನಿಗದಿಪಡಿಸಲಾಗಿದೆ. ಗುತ್ತಿಗೆದಾದರು ಕಾಮಗಾರಿಯನ್ನು ದಿನಾಂಕ:24-11-2019 ರಂದು ಪ್ರಾರಂಭಿಸಿದ್ದು, ಪ್ರಸ್ತುತ ಹಂತದ ವಿವರ ಕೆಳಕಂಡಂತಿದೆ: **ಮೊದಲನೇ ಹಂತ:** ಜಾಕ್‌ವೆಲ್ ಕಾಮಗಾರಿಯ ಮಣ್ಣು ಅಗೆತ ಪೂರ್ಣಗೊಂಡಿದ್ದು, ರೈಸಿಂಗ್ ಮೈನ್‌ನ 5.940 ಕಿ.ಮೀ ಗೆ ಪೈಪ್ ಸರಬರಾಜು ಮಾಡಲಾಗಿದೆ. ಡೆಲಿವೆರಿ ಚೇಂಬರ್ ಹಾಗೂ ಗ್ರಾವಿಟಿ ಮೈನ್ ಕೆಲಸಗಳನ್ನು ನಿರ್ವಹಿಸಬೇಕಾಗಿದೆ. **ಎರಡನೇ ಹಂತ:** ಪಂಪ್‌ಹೌಸ್ ಮತ್ತು ಜಾಕ್‌ವೆಲ್ ಕಾಮಗಾರಿಯ ರ್‍ಯಾಫ್ಟ್ ಫೌಂಡೇಷನ್ ಪೂರ್ಣಗೊಂಡಿದ್ದು, ರೈಸಿಂಗ್ ಮೈನ್‌ನ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಡೆಲಿವೆರಿ ಚೇಂಬರ್ ಹಾಗೂ ಗ್ರಾವಿಟಿ ಮೈನ್ ಕೆಲಸಗಳನ್ನು ನಿರ್ವಹಿಸಬೇಕಾಗಿದೆ.
ಈ	ಈ ಕಾಮಗಾರಿಗಾಗಿ ಎಷ್ಟು ಹಣವನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆ? (ವಿವರ ನೀಡುವುದು)	ಈವರೆಗೆ ಗುತ್ತಿಗೆದಾರರಿಗೆ ರೂ.10.41 ಕೋಟಿಗಳನ್ನು ಪಾವತಿಸಲಾಗಿದೆ.

ಸಂಖ್ಯೆ:ಜಸಂಇ 80 ಎನ್‌ಎಲ್‌ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ANNEXURE - I

INDIA NON JUDICIAL

सत्यमेव जयते

Government of Karnataka

e-Stamp

Certificate No.	:	IN-KA18341085559544R
Certificate Issued Date	:	16-Oct-2019 03:33 PM
Account Reference	:	NONACC (FI)/ kacrsfl08/ BELLARY1/ KA-BY
Unique Doc. Reference	:	SUBIN-KAKACRSFL0856571940000584R
Purchased by	:	SRI SRINIVASA CONSTRUCTIONS INDIA PVT LTD BALLARI
Description of Document	:	Article 12 Bond
Description	:	AGREEMENT
Consideration Price (Rs.)	:	0 (Zero)
First Party	:	E E NO3 HLBC DIVISION CNNL KRPET MANDYA
Second Party	:	SRI SRINIVASA CONSTRUCTIONS INDIA PVT LTD BALLARI
Stamp Duty Paid By	:	SRI SRINIVASA CONSTRUCTIONS INDIA PVT LTD BALLARI
Stamp Duty Amount(Rs.)	:	2,33,000 (Two Lakh Thirty Three Thousand only)

Authorised Signatory
VARADAVINAYAKA CREDIT
SAHAKARA SANGHA NIYAMITH
BELLARY

Please write or type below this line

AGREEMENT NO.69/2019-20 DATED : 16TH OCTOBER 2019.

This agreement, made on the 16th Oct 2019, between **Executive Engineer, No.3, HLBC Division, CNNL, Krishnarajapete, Mandya District, Karnataka State** on Behalf of **Managing Director,, Cauvery Neeravari Nigama Limited, Surface water data Centre, 3rd & 4th Floor, Anand Rao Circle, Bangalore -560009**, Karnataka here in after called "The Employer" and Sri Srinivasa Constructions India Pvt. Ltd. Prop. Y PITCHESWARA RAO, No.28(4)C,Shivasankar Nilaya, Thalluru Road, Shakthi Nursing Home, Ballari Road, Ballari here in after called "The Contractor" on the other part.

DIRECTOR

Statutory Alert:
1 The authenticity of this Stamp Certificate should be verified at "www.shcilestamp.com". Any discrepancy in the details on this Certificate and as available on the website renders it invalid.
2 The onus of checking the legitimacy is on the users of the certificate.
3 In case of any discrepancy please inform the Competent Authority.

Whereas the Employer is desirous that the Contractor has to execute components such as -"PART-A on TURN KEY and Part-B on item rate"

Part"A" Supply, Installation, Testing and Commissioning of The Scheme To Lift Water From Hemavathy river near Goodehosahally Village to Fill 69 Tanks and 23 kates of K.R.pete, Nagamangala and Channarayapatana taluk for Drinking Wate Purpose consisting of the Components such as Providing M.S. Rising Main including Earthwork Excavation in all Classification. Construction Of Anchor Blocks & Thrust Blocks, Air Valve Chamber, Scour valve chamber, Air vessel, one way surge tank, pipe supports, pressure gauge on bleeder valves encasing Of The Pipes In Road / Halla crossings, providing RCC supports to rising main as per necessity, Providing Suitable Dismantling Joints, Vent Pipes, Bleeders, Conducting Surge Analysis and Providing Suitable Surge Protection System, Conducting Sump Model Analysis, Providing & fixing all types of necessary Valves of Suitable Capacity with valve chambers, Providing and Erecting Delivery & suction Pipes Manifold, etc., with Suitable Foundations, Providing, Erecting & Commissioning Of Suitable Pumps and Motors, providing outdoor substation (2 x 5 MVA 66/6.6 KV for stage-I and 1 X 5 MVA 66/6.6 K.V for stage II) including providing Metering cubicle, platform for cubicles and transformers, providing and erecting, commissioning 66/6.6 K.V power transformers/Auxiliary transformer, providing chain link fencing to Outdoor substation and transformers, Providing & Fixing EOT Cranes Of Suitable Capacity, arranging power supply to pump house control room with necessary control cables, HT panels, soft starters, capacitor bank, breakers and allied components as Per KPTCL / CESC Norms and Other Connected Electrical & Electro-Mechanical Works, Formation Of Approach Roads, etc complete Supply Of Spare Parts, Tools, Technical Man Power for Operating and Maintaining the Scheme for a Period Of 3 Years after Successful Commissioning Of the Scheme as per the detailed scope of work for Stage I and Stage-II etc complete Supply Of Spare Parts, Tools, with Gate and office room. Technical Man Power For Operating and Maintaining the Scheme for a Period Of 3 Years after Successful Commissioning Of the Scheme as per the detailed scope of work on TURN KEY Basis.

Part "B" : This includes Intake channel, forebay cum sump and pump house, Indoor electrification . road around pump house, and providing chain link fencing around pump house yard, Delivery cistern, Manhole chamber and Gravity pipeline system etc for "Providing drinking water sheme to 69 tanks and 23 kattas in K.R.Pet Taluk, Channarayapatna taluk and Nagamangala Taluk by lifting water from Hemavathy River" on Item rate Tender.

In concurrence with the conditions laid down in the letter of acceptance of Managing Director, CNNL, Bengaluru vide letter order No. [illegible]-3/806/2019-20 [illegible] :14.10.2019.

The company has to execute the work at the cost of Rs. 207,36,13,031.00 (Rupees Two hundred seven crores thirty six lakhs thirteen thousand thirty one only) (Excluding GST) on combination of 'TURN KEY' basis for Part –A Rs. 1747163124.00 and 'ITEM RATE' for Part –B Rs. 326449907.00 (with tender premium of 7.00% above) the CSR amount of Rs. 193,79,56,104.50 (Rupees One hundred ninety three crores seventy nine lakhs fifty six thousand one hundred four only) subject to the conditions that the contractor has to obtain the Designs and Execute the works as per Departmental terms and conditions, specifications and drawings forming part of this contract. Time allowed for completion of work is 24 months (Twenty four months - including monsoon period) from the date of work order issued to the contractor, including operation and maintenance of the project for a period of 3 years after completion and commissioning of the project. The defect liability for the work is 3 years after completion of the scheme in all respects.

NOW THIS AGREEMENT WITNESSTH as follows :

1. In this Agreement, words and expression shall have the same meanings as are respectively assigned to them in the Conditions of Contract hereinafter referred to and they shall be deemed to form and be read and construed as part of this Agreement.
2. In consideration of the payments to be made by the Employer to the Contractor as hereinafter mentioned, the Contractor hereby covenants with the Employer to execute and complete the Works and remedy any defects therein in conformity in all aspects with the provisions of the Contract.
3. The Employer hereby covenants to pay the Contractor in consideration of the execution and completion of the Works and remedying the defects wherein the Contract Price or such other sum as may become payable under the provisions of the Contract at the times and in the manner prescribed by the Contract.
4. The following documents shall be deemed to form and be read and construed as part of this Agreement, viz :
   - i. Letter of Acceptance;
   - ii. Notice to proceed with the works;
   - iii. Contractor's Bid;
   - iv. Contract Data;
   - v. Conditions Of Contract (General and Special);
   - vi. Specifications,
   - vii. Drawings;
   - viii. Bill of Quantities; and
   - ix. Any other document listed in the Contract Data as forming part of the contract.

In witness whereof the parties there to have caused this Agreement to be executed the day and year first before written.

The Common Seal of ______________________________
as here unto affixed in the presence of:
Signed, Sealed and Delivered by the said
____
in the presence of:
Binding Signature of Employer ______________________
Binding Signature of Contractor ______________________

Dated the 16th day of Oct 2019

Witness

M/s Sri Srinivasa Constructions India Pvt Ltd
Prop. Y PITCHESWARA RAO

1.
2.

THE ABOVE TENDER IS HERE BY ACCEPTED BY ME ON BEHALF OF THE MANAGING DIRECTOR, C.N.N.L, BANGALORE
Dated the 16th day of Oct 2019

Executive Engineer
No.3, Hemavathy Left Bank Canal Division,
C.N.N.L., Krishnarajpete

Scanned with CamScanner

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3275

ಉತ್ತರಿಸಬೇಕಾದ ದಿನಾಂಕ : 23/03/2021

ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ತಾಲ್ಲೂಕು ಕೇಂದ್ರಗಳಲ್ಲಿ ಒಳಾಂಗಣ ಕ್ರೀಡಾಂಗಣಗಳು ಇವೆ;	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 47 ತಾಲ್ಲೂಕು ಕೇಂದ್ರಗಳಲ್ಲಿ (27 ಜಿಲ್ಲಾ ಕೇಂದ್ರಗಳು ಸೇರಿದಂತೆ) ಒಳಾಂಗಣ ಕ್ರೀಡಾಂಗಣಗಳು ಇವೆ. ಒಟ್ಟು 09 ತಾಲ್ಲೂಕುಗಳಲ್ಲಿ ಒಳಾಂಗಣ ಕ್ರೀಡಾಂಗಣಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.
ಆ)	ಒಳಾಂಗಣ ಕ್ರೀಡಾಂಗಣ ಇಲ್ಲದೇ ಇರುವ ತಾಲ್ಲೂಕುಗಳು ಯಾವುವು;	ಒಳಾಂಗಣ ಕ್ರೀಡಾಂಗಣ ಇಲ್ಲದೇ ಇರುವ ತಾಲ್ಲೂಕುಗಳ ವಿವರಗಳನ್ನು **ಅನುಬಂಧದಲ್ಲಿ ನೀಡಲಾಗಿದೆ.**
ಇ)	ಈ ತಾಲ್ಲೂಕು ಕೇಂದ್ರಗಳಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮವೇನು? (ಪೂರ್ಣ ವಿವರ ನೀಡುವುದು)	ಸೂಕ್ತ ನಿವೇಶನ ಲಭ್ಯವಿಲ್ಲದಿರುವುದು ಹಾಗೂ ಅನುದಾನದ ಕೊರತೆಯಿಂದ ತಾಲ್ಲೂಕು ಕೇಂದ್ರಗಳಲ್ಲಿ ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲು ಸಾಧ್ಯವಾಗಿರುವುದಿಲ್ಲ. ಸೂಕ್ತ ನಿವೇಶನ ಹಾಗೂ ಅನುದಾನದ ಲಭ್ಯತೆ ಆಧರಿಸಿ, ಹಂತ-ಹಂತವಾಗಿ ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲು ಕ್ರಮವಹಿಸಲಾಗುತ್ತಿದೆ. ಕೇಂದ್ರ ಪುರಸ್ಕೃತ ಯೋಜನೆಯಾದ ಖೇಲೋ ಇಂಡಿಯಾ ಕಾರ್ಯಕ್ರಮದಡಿ ಕೆಳಕಾಣಿಸಿದ ಸ್ಥಳಗಳಲ್ಲಿ ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ :- 1. ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. 2. ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. 3. ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. 4. ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. 5. ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ. 6. ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

ವೈಎಸ್‌ಡಿ-ಇಬಿಬಿ/75/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಅನುಬಂಧ

ಒಳಾಂಗಣ ಕ್ರೀಡಾಂಗಣಗಳಿಲ್ಲದ ತಾಲ್ಲೂಕುಗಳ ವಿವರ

ಕ್ರ. ಸಂ	ಜಿಲ್ಲೆ	ತಾಲ್ಲೂಕು
1.	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ
2.	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ
3.	ಬೆಂಗಳೂರು ಗ್ರಾಮಾಂತರ	ಹೊಸಕೋಟೆ
4.	ಬೆಂಗಳೂರು ಗ್ರಾಮಾಂತರ	ನೆಲಮಂಗಲ
5.	ಬೆಂಗಳೂರು ನಗರ	ಆನೇಕಲ್
6.	ಬೆಂಗಳೂರು ನಗರ	ಬೆಂಗಳೂರು ದಕ್ಷಿಣ (ಹೊನ್ನಗಾನಹಟ್ಟಿ)
7.	ಬೆಂಗಳೂರು ನಗರ	ಬೆಂಗಳೂರು ಪೂರ್ವ (ದೇವರ ಜೀವನಹಳ್ಳಿ)
8.	ಬೆಂಗಳೂರು ನಗರ	ರಾವುತ್ತನಹಳ್ಳಿ
9.	ಬೆಂಗಳೂರು ನಗರ	ಯಲಹಂಕ
10.	ಬಾಗಲಕೋಟೆ	ಬೀಳಗಿ
11.	ಬಾಗಲಕೋಟೆ	ಹುನಗುಂದ
12.	ಬಾಗಲಕೋಟೆ	ಬಾದಾಮಿ
13.	ಬಾಗಲಕೋಟೆ	ಗುಳೇದಗುಡ್ಡ
14.	ಬಾಗಲಕೋಟೆ	ಇಳಕಲ್
15.	ಬಾಗಲಕೋಟೆ	ರಬಕವಿ--ಬನಹಟ್ಟಿ
16.	ಬಾಗಲಕೋಟ	ತೇರದಾಳ
17.	ಬಳ್ಳಾರಿ	ಸಿರಗುಪ್ಪ
18.	ಬಳ್ಳಾರಿ	ಸಂಡೂರು
19.	ಬಳ್ಳಾರಿ	ಕುರುಗೋಡು
20.	ಬಳ್ಳಾರಿ	ಕಂಪ್ಲಿ
21.	ಬೆಳಗಾವಿ	ಅಥಣಿ
22.	ಬೆಳಗಾವಿ	ಚಿಕ್ಕೋಡಿ
23.	ಬೆಳಗಾವಿ	ಹುಕ್ಕೇರಿ
24.	ಬೆಳಗಾವಿ	ರಾಯಭಾಗ
25.	ಬೆಳಗಾವಿ	ಸವದತ್ತಿ
26.	ಬೆಳಗಾವಿ	ಖಾನಾಪುರ
27.	ಬೆಳಗಾವಿ	ರಾಮದುರ್ಗ
28.	ಬೆಳಗಾವಿ	ಮುಡಲಗಿ
29.	ಬೆಳಗಾವಿ	ನಿಪ್ಪಾಣಿ
30.	ಬೆಳಗಾವಿ	ಕಾಗವಾಡ
31.	ಬೆಳಗಾವಿ	ಕಿತ್ತೂರು
32.	ಬೆಳಗಾವಿ	ಯರಗಟ್ಟಿ
33.	ಬೀದರ	ಔರಾದ್
34.	ಬೀದರ	ಹುಮ್ನಾಬಾದ್
35.	ಬೀದರ್	ಚಿಟ್ಗುಪ್ಪ
36.	ಬೀದರ್	ಹುಲಸೂರು
37.	ಬೀದರ್	ಕಮಲನಗರ
38.	ಬೀದರ್	ಭಾಲ್ಕಿ
39.	ಚಾಮರಾಜನಗರ	ಕೊಳ್ಳೇಗಾಲ
40.	ಚಾಮರಾಜನಗರ	ಯಳಂದೂರು

ಕ್ರ. ಸಂ	ಜಿಲ್ಲೆ	ತಾಲ್ಲೂಕು
41.	ಚಾಮರಾಜನಗರ	ಹನೂರು
42.	ಚಿಕ್ಕಬಳ್ಳಾಪುರ	ಬಾಗೇಪಲ್ಲಿ
43.	ಚಿಕ್ಕಬಳ್ಳಾಪುರ	ಚಿಂತಾಮಣಿ
44.	ಚಿಕ್ಕಬಳ್ಳಾಪುರ	ಶಿಡ್ಲಘಟ್ಟ
45.	ಚಿಕ್ಕಬಳ್ಳಾಪುರ	ಗುಡಿಬಂಡೆ
46.	ಚಿಕ್ಕಬಳ್ಳಾಪುರ	ಚೇಳೂರು
47.	ಚಿಕ್ಕಮಗಳೂರು	ಕಡೂರು
48.	ಚಿಕ್ಕಮಗಳೂರು	ಮೂಡಿಗೆರೆ
49.	ಚಿಕ್ಕಮಗಳೂರು	ನರಸಿಂಹರಾಜಪುರ
50.	ಚಿಕ್ಕಮಗಳೂರು	ಶೃಂಗೇರಿ
51.	ಚಿಕ್ಕಮಗಳೂರು	ಕೊಪ್ಪ
52.	ಚಿಕ್ಕಮಗಳೂರು	ತರೀಕೆರೆ
53.	ಚಿಕ್ಕಮಗಳೂರು	ಅಜ್ಜಂಪುರ
54.	ಚಿತ್ರದುರ್ಗ	ಚಳ್ಳಕೆರೆ
55.	ಚಿತ್ರದುರ್ಗ	ಹೊಳಲ್ಕೆರೆ
56.	ಚಿತ್ರದುರ್ಗ	ಹಿರಿಯೂರು
57.	ಚಿತ್ರದುರ್ಗ	ಮೊಳಕಾಲ್ಮೂರು
58.	ದಕ್ಷಿಣಕನ್ನಡ	ಬೆಳ್ತಂಗಡಿ
59.	ದಕ್ಷಿಣಕನ್ನಡ	ಪುತ್ತೂರು
60.	ದಕ್ಷಿಣಕನ್ನಡ	ಸುಳ್ಯ
61.	ದಕ್ಷಿಣಕನ್ನಡ	ಮೂಡಬಿದರೆ
62.	ದಕ್ಷಿಣಕನ್ನಡ	ಉಳ್ಳಾಲ
63.	ದಕ್ಷಿಣಕನ್ನಡ	ಮುಲ್ಕಿ
64.	ದಕ್ಷಿಣಕನ್ನಡ	ಕಡಬ
65.	ದಕ್ಷಿಣಕನ್ನಡ	ಬಂಟ್ವಾಳ
66.	ದಾವಣಗೆರೆ	ಚನ್ನಗಿರಿ
67.	ದಾವಣಗೆರೆ	ಹರಿಹರ
68.	ದಾವಣಗೆರೆ	ಜಗಳೂರು
69.	ದಾವಣಗೆರೆ	ನ್ಯಾಮತಿ
70.	ಧಾರವಾಡ	ಅಳ್ನಾವರ
71.	ಧಾರವಾಡ	ಅಣ್ಣಿಗೇರಿ
72.	ಧಾರವಾಡ	ಕಲಘಟಗಿ
73.	ಧಾರವಾಡ	ಕುಂದಗೋಳ
74.	ಧಾರವಾಡ	ನವಲಗುಂದ
75.	ಧಾರವಾಡ	ಹುಬ್ಬಳ್ಳಿ (ಗ್ರಾ)
76.	ಗದಗ	ಮುಂಡರಗಿ
77.	ಗದಗ	ನರಗುಂದ
78.	ಗದಗ	ರೋಣ
79.	ಗದಗ	ಶಿರಹಟ್ಟಿ
80.	ಗದಗ	ಗಜೇಂದ್ರಗಡ
81.	ಗದಗ	ಲಕ್ಷ್ಮೇಶ್ವರ
82.	ಹಾಸನ	ಆಲೂರು
83.	ಹಾಸನ	ಅರಸೀಕೆರೆ
84.	ಹಾಸನ	ಅರಕಲಗೂಡು

ಕ್ರ. ಸಂ	ಜಿಲ್ಲೆ	ತಾಲ್ಲೂಕು
85.	ಹಾಸನ	ಬೇಲೂರು
86.	ಹಾಸನ	ಚನ್ನರಾಯಪಟ್ಟಣ
87.	ಹಾಸನ	ಸಕಲೇಶಪುರ
88.	ಹಾವೇರಿ	ಬ್ಯಾಡಗಿ
89.	ಹಾವೇರಿ	ಹಾನಗಲ್
90.	ಹಾವೇರಿ	ರಾಣೇಬೆನ್ನೂರು
91.	ಹಾವೇರಿ	ರಟ್ಟೆಹಳ್ಳಿ
92.	ಕಲಬುರಗಿ	ಆಲಂದ
93.	ಕಲಬುರಗಿ	ಚಿಂಚೋಳಿ
94.	ಕಲಬುರಗಿ	ಜೇವರ್ಗಿ
95.	ಕಲ್ಬುರ್ಗಿ	ಅಫಜಲ್ ಪುರ
96.	ಕಲಬುರಗಿ	ಸೇಡಂ
97.	ಕಲಬುರಗಿ	ಮೆಹಂಗಾಂವ್ (ಕಮಲಪುರ)
98.	ಕಲಬುರಗಿ	ಶಹಾಬಾದ್
99.	ಕಲಬುರಗಿ	ಕಾಳಗಿ
100.	ಕಲಬುರಗಿ	ಯಡ್ರಾಮಿ
101.	ಕಲಬುರಗಿ	ಅತನೂರು
102.	ಕೊಡಗು	ಸೋಮವಾರಪೇಟೆ
103.	ಕೊಡಗು	ಕುಶಾಲನಗರ
104.	ಕೋಲಾರ	ಮಾಲೂರು
105.	ಕೋಲಾರ	ಮುಳಬಾಗಿಲು
106.	ಕೋಲಾರ	ಶ್ರೀನಿವಾಸಪುರ
107.	ಕೋಲಾರ	ಕೆ.ಜಿ.ಎಫ್
108.	ಕೊಪ್ಪಳ	ಕುಷ್ಟಗಿ
109.	ಕೊಪ್ಪಳ	ಯಲಬುರ್ಗ
110.	ಕೊಪ್ಪಳ	ಕನಕಗಿರಿ
111.	ಕೊಪ್ಪಳ	ಕಾರಟಗಿ
112.	ಕೊಪ್ಪಳ	ಕುಗನೂರು
113.	ಮಂಡ್ಯ	ಕೆ.ಆರ್.ಪೇಟೆ
114.	ಮಂಡ್ಯ	ಮಳವಳ್ಳಿ
115.	ಮಂಡ್ಯ	ನಾಗಮಂಗಲ
116.	ಮಂಡ್ಯ	ಪಾಂಡವಪುರ
117.	ಮಂಡ್ಯ	ಶ್ರೀರಂಗಪಟ್ಟಣ
118.	ಮೈಸೂರು	ಹೆಗ್ಗಡದೇವನಕೋಟೆ
119.	ಮೈಸೂರು	ಕೃಷ್ಣರಾಜನಗರ
120.	ಮೈಸೂರು	ನಂಜನಗೂಡು
121.	ಮೈಸೂರು	ಪಿರಿಯಾಪಟ್ಟಣ
122.	ಮೈಸೂರು	ಟಿ.ನರಸೀಪುರ
123.	ಮೈಸೂರು	ಸರಗೂರು
124.	ರಾಮನಗರ	ಕನಕಪುರ
125.	ರಾಮನಗರ	ಮಾಗಡಿ
126.	ರಾಯಚೂರು	ದೇವದುರ್ಗ
127.	ರಾಯಚೂರು	ಸಿಂಧನೂರು

ಕ್ರ. ಸಂ	ಜಿಲ್ಲೆ	ತಾಲ್ಲೂಕು
128.	ರಾಯಚೂರು	ಮಾನ್ವಿ
129.	ರಾಯಚೂರು	ಸಿರವಾರ
130.	ರಾಯಚೂರು	ಮಸ್ಕಿ
131.	ಶಿವಮೊಗ್ಗ	ಹೊಸನಗರ
132.	ಶಿವಮೊಗ್ಗ	ಶಿಕಾರಿಪುರ
133.	ಶಿವಮೊಗ್ಗ	ಸೊರಬ
134.	ಶಿವಮೊಗ್ಗ	ತೀರ್ಥಹಳ್ಳಿ
135.	ತುಮಕೂರು	ಚಿಕ್ಕನಾಯಕನಹಳ್ಳಿ
136.	ತುಮಕೂರು	ಕುಣಿಗಲ್
137.	ತುಮಕೂರು	ಮಧುಗಿರಿ
138.	ತುಮಕೂರು	ಪಾವಗಡ
139.	ತುಮಕೂರು	ಶಿರಾ
140.	ತುಮಕೂರು	ತಿಪಟೂರು
141.	ತುಮಕೂರು	ತುರುವೇಕೆರೆ
142.	ತುಮಕೂರು	ಗುಬ್ಬಿ
143.	ಉಡುಪಿ	ಕಾರ್ಕಳ
144.	ಉಡುಪಿ	ಕುಂದಾಪುರ
145.	ಉಡುಪಿ	ಹೆಜಮಾಡಿ (ಕಾಪು)
146.	ಉಡುಪಿ	ಬ್ರಹ್ಮಾವರ
147.	ಉಡುಪಿ	ಬೈಂದೂರು
148.	ಉತ್ತರಕನ್ನಡ	ಅಂಕೋಲ
149.	ಉತ್ತರಕನ್ನಡ	ಭಟ್ಕಳ
150.	ಉತ್ತರಕನ್ನಡ	ಹಳಿಯಾಳ
151.	ಉತ್ತರಕನ್ನಡ	ಜೋಯಿಡಾ
152.	ಉತ್ತರಕನ್ನಡ	ಮುಂಡಗೋಡ
153.	ಉತ್ತರಕನ್ನಡ	ಯಲ್ಲಾಪುರ
154.	ಉತ್ತರಕನ್ನಡ	ಕಾರವಾರ
155.	ಉತ್ತರಕನ್ನಡ	ಹೊನ್ನಾವರ
156.	ಉತ್ತರಕನ್ನಡ	ಕುಮಟಾ
157.	ಉತ್ತರಕನ್ನಡ	ದಾಂಡೇಲಿ
158.	ಉತ್ತರಕನ್ನಡ	ಸಿದ್ದಾಪುರ
159.	ವಿಜಯಪುರ	ಇಂಡಿ
160.	ವಿಜಯಪುರ	ಸಿಂದಗಿ
161.	ವಿಜಯಪುರ	ತಾಳಿಕೋಟೆ
162.	ವಿಜಯಪುರ	ದೇವರ ಹಿಪ್ಪರಗಿ
163.	ವಿಜಯಪುರ	ಚಡಚಣ
164.	ವಿಜಯಪುರ	ತಿಕೋಟ
165.	ವಿಜಯಪುರ	ಕೊಲ್ಹಾರ್
166.	ವಿಜಯಪುರ	ನಿಡಗುಂದಿ
167.	ವಿಜಯಪುರ	ಬಸವನ ಬಾಗೇವಾಡಿ
168.	ವಿಜಯಪುರ	ಮುದ್ದೇಬಿಹಾಳ
169.	ವಿಜಯಪುರ	ಬಬಲೇಶ್ವರ
170.	ವಿಜಯನಗರ	ಹೂವಿನಹಡಗಲಿ
171.	ವಿಜಯನಗರ	ಹೊಸಪೇಟೆ

ಕ್ರ. ಸಂ	ಜಿಲ್ಲೆ	ತಾಲ್ಲೂಕು
172.	ವಿಜಯನಗರ	ಹರಪನಹಳ್ಳಿ
173.	ವಿಜಯನಗರ	ಕೂಡ್ಲಿಗಿ
174.	ವಿಜಯನಗರ	ಹಗರಿಬೊಮ್ಮನಹಳ್ಳಿ
175.	ವಿಜಯನಗರ	ಕೊಟ್ಟೂರು
176.	ಯಾದಗಿರಿ	ಶಹಾಪುರ
177.	ಯಾದಗಿರಿ	ಸುರಪುರ
178.	ಯಾದಗಿರಿ	ವಡಗೇರಾ
179.	ಯಾದಗಿರಿ	ಹುಣಸಗಿ
180.	ಯಾದಗಿರಿ	ಗುರುಮಿಠ್ಕಲ್

ವೈಎಸ್‌ಡಿ-ಇಬಿಬಿ/75/2021

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3278
2	ಸದಸ್ಯರ ಹೆಸರು	:	ಶ್ರೀ ಮಂಜುನಾಥ. ಆರ್ (ದಾಸರಹಳ್ಳಿ)
3	ಉತ್ತರಿಸುವ ದಿನಾಂಕ	:	23-03-2021
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ರಾಜಕಾಲುವೆಗಳ ಉದ್ದಳತೆಯ ಮಾಹಿತಿ ಇದೆಯೇ; ಇದ್ದಲ್ಲಿ, ಈ ಅಳತೆಯಲ್ಲಿ ಎಷ್ಟು ಭಾಗದಷ್ಟು ತಡೆಗೋಡೆ ನಿರ್ಮಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 64.88 ಕಿ.ಮೀ ನಷ್ಟು ರಾಜಕಾಲುವೆಗಳು ಇದ್ದು, ಇದರಲ್ಲಿ ಸುಮಾರು 12.00 ಕಿ.ಮೀ ಉದ್ದದಷ್ಟು ಆರ್.ಸಿ.ಸಿ ತಡೆಗೋಡೆ ನಿರ್ಮಿಸಲಾಗಿರುತ್ತದೆ. ಮುಂದುವರೆದು, ಈ ಹಿಂದೆ ಇದ್ದ ದಾಸರಹಳ್ಳಿ ಪುರಸಭೆಯಿಂದ ಸುಮಾರು 20.00 ಕಿ.ಮೀನಷ್ಟು SSM ತಡೆಗೋಡೆಯನ್ನು ನಿರ್ಮಿಸಲಾಗಿರುತ್ತದೆ.
ಆ)	ಈ ಕ್ಷೇತ್ರದ ರಾಜಕಾಲುವೆಗೆ ತಡೆಗೋಡೆಗಳಿಲ್ಲದೆ ಮಳೆಗಾಲದಲ್ಲಿ ತಗ್ಗು ಪ್ರದೇಶಗಳಿಗೆ ಹಲವಾರು ಬಾರಿ ನೀರು ನುಗ್ಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಸಮಸ್ಯೆ ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು)	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಾಜಕಾಲುವೆಗೆ ತಡೆಗೋಡೆಗಳಿಲ್ಲದೆ ಮಳೆಗಾಲದಲ್ಲಿ ಹಲವಾರು ಬಾರಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿರುವುದು ಗಮನಕ್ಕೆ ಬಂದಿರುತ್ತದೆ. ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ ಅಡಿಯಲ್ಲಿ ರೂ. 16.54 ಕೋಟಿಗಳಷ್ಟು ಹಣವನ್ನು ಬೃಹತ್ ನೀರುಗಾಲುವೆಗೆ ಆರ್.ಸಿ.ಸಿ ತಡೆಗೋಡೆ ನಿರ್ಮಿಸಲು ಅನುದಾನ ನೀಡಲಾಗಿದ್ದು, ಬೃಹತ್ ನೀರುಗಾಲುವೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ರೂ. 7.00 ಕೋಟಿಗಳ ಅನುದಾನ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಕಾಮಗಾರಿಯ ಸಂಪೂರ್ಣ ವಿವರಗಳನ್ನು **ಅನುಬಂಧ-1ರಲ್ಲಿ ನೀಡಿದೆ.**
ಇ)	ಸದರಿ ಕ್ಷೇತ್ರ ವ್ಯಾಪ್ತಿಯಲ್ಲಿ ರಾಜಕಾಲುವೆಯ ಸ್ಥಳಗಳಲ್ಲಿ ಒತ್ತುವರಿ ಮಾಡಿ ಕಟ್ಟಡಗಳನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಹಾಗೂ ನಿರ್ದೇಶನವಿದ್ದರೂ ಸಹ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳದಿರಲು ಕಾರಣವೇನು;	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 165 ಸ್ಥಳಗಳಲ್ಲಿ ಬೃಹತ್ ನೀರುಗಾಲುವೆ ಒತ್ತುವರಿಗಳನ್ನು ಗುರುತಿಸಲಾಗಿದ್ದು, ಇಲ್ಲಿಯವರೆಗೆ 44 ಒತ್ತುವರಿಗಳನ್ನು ತೆರವುಗೊಳಿಸಲಾಗಿದ್ದು, ಬಾಕಿ ಉಳಿದಿರುವ 121 ಒತ್ತುವರಿಗಳನ್ನು ಹಂತ ಹಂತವಾಗಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ)	ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಜಕಾಲುವೆಯಿಂದ ನೀರು ನುಗ್ಗಿ ಸಂಕಷ್ಟಕ್ಕೆ ಒಳಗಾಗಿರುವವರಿಗೆ ಈವರೆಗೆ ಎಷ್ಟು ಮೊತ್ತದ ಪರಿಹಾರವನ್ನು ವಿತರಿಸಲಾಗಿದೆ; ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)	ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ 2020-21ನೇ ಸಾಲಿನಲ್ಲಿ ಈವರೆಗೆ ರೂ. 1,63,000-00ಗಳ ಮಳೆ ಪರಿಹಾರ ಮೊತ್ತವನ್ನು ವಿತರಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ಸದರಿ ಸಮಸ್ಯೆಯನ್ನು ನಿವಾರಿಸಲು ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ ಅಡಿಯಲ್ಲಿ ರೂ. 16.54 ಕೋಟಿಗಳಷ್ಟು ಹಣವನ್ನು ಬೃಹತ್ ನೀರುಗಾಲುವೆಗೆ ಆರ್.ಸಿ.ಸಿ ತಡೆಗೋಡೆ ನಿರ್ಮಿಸಲು ಅನುದಾನ ನೀಡಲಾಗಿದ್ದು, ಬೃಹತ್ ನೀರುಗಾಲುವೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ರೂ.7.00 ಕೋಟಿಗಳ ಅನುದಾನ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ನಅಇ 152 ಎಂಎನ್‌ಯು 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಅನುಬಂಧ-1

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳು

Sl.No	Name of the work	Amount (Rs in Lakhs)	Remarks
1	Construction of SWD U-Shape Drain at Abbigere Police Station Road to Juice Factory in Ward No.12	700.00	Tender in process
2	Construction / Remodeling of Primary, Secondary and Tertiary drains, Culverts / Bridges and all other allied works of SWD spread out at various location in Dasarahalli Zone under CMNNY Scheme Package 01 2019-20 Dasarahalli Zone G.O-ANNEXURE-03 Action Plan Sl No 81 82 83 84	1654.00	Work in progress
	Total	2354.00	

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3278
2. ಸದಸ್ಯರ ಹೆಸರು : ಶ್ರೀ ಮಂಜುನಾಥ ಆರ್.
3. ಉತ್ತರಿಸುವ ದಿನಾಂಕ : 23-03-2021
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ರಾಜಕಾಲುವೆಗಳ ಉದ್ದಳತೆಯ ಮಾಹಿತಿ ಇದೆಯೇ; ಇದ್ದಲ್ಲಿ, ಈ ಅಳತೆಯಲ್ಲಿ ಎಷ್ಟು ಭಾಗದಷ್ಟು ತಡೆಗೋಡೆ ನಿರ್ಮಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಾಜಕಾಲುವೆಗಳ ಉದ್ದ 64.88 ಕಿ.ಮೀ ಉದ್ದ ಇದ್ದು, ಇದರಲ್ಲಿ ಸುಮಾರು 12.00 ಕಿ.ಮೀ ಉದ್ದದಷ್ಟು ಆರ್.ಸಿ.ಸಿ ತಡೆಗೋಡೆ ನಿರ್ಮಿಸಲಾಗಿರುತ್ತದೆ. ಮುಂದುವರೆದು, ಈ ಹಿಂದೆ ಇದ್ದ ದಾಸರಹಳ್ಳಿ ಪುರಸಭೆಯಿಂದ SSM ತಡೆಗೋಡೆಯನ್ನು ಸುಮಾರು 20.00 ಕಿ.ಮೀನಷ್ಟು ನಿರ್ಮಿಸಲಾಗಿರುತ್ತದೆ.
ಆ	ಈ ಕ್ಷೇತ್ರದ ರಾಜಕಾಲುವೆಗೆ ತಡೆಗೋಡೆಗಳಿಲ್ಲದೆ ಮಳೆಗಾಲದಲ್ಲಿ ತಗ್ಗು ಪ್ರದೇಶಗಳಿಗೆ ಹಲವಾರು ಬಾರಿ ನೀರು ನುಗ್ಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಸಮಸ್ಯೆ ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು)	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಾಜಕಾಲುವೆಗೆ ತಡೆಗೋಡೆಗಳಿಲ್ಲದೆ ಮಳೆಗಾಲದಲ್ಲಿ ಹಲವಾರು ಬಾರಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿರುವುದು ಗಮನಕ್ಕೆ ಬಂದಿರುತ್ತದೆ ಹಾಗೂ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ ಅಡಿಯಲ್ಲಿ ರೂ. 16.54 ಕೋಟಿಗಳಷ್ಟು ಹಣವನ್ನು ಬೃಹತ್ ನೀರುಗಾಲುವೆಗೆ ಆರ್.ಸಿ.ಸಿ ತಡೆಗೋಡೆ ನಿರ್ಮಿಸಲು ಅನುದಾನ ನೀಡಲಾಗಿದ್ದು, ಬೃಹತ್ ನೀರುಗಾಲುವೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ರೂ. 7.00 ಕೋಟಿಗಳ ಅನುದಾನ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಕಾಮಗಾರಿಯ ಸಂಪೂರ್ಣ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.
ಇ	ಸದರಿ ಕ್ಷೇತ್ರ ವ್ಯಾಪ್ತಿಯಲ್ಲಿ ರಾಜಕಾಲುವೆಯ ಸ್ಥಳಗಳಲ್ಲಿ ಒತ್ತುವರಿ ಮಾಡಿ ಕಟ್ಟಡಗಳನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಹಾಗೂ ನಿರ್ದೇಶನವಿದ್ದರೂ ಸಹ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳದಿರಲು ಕಾರಣವೇನು;	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 165 ಸ್ಥಳಗಳಲ್ಲಿ ಬೃಹತ್ ನೀರುಗಾಲುವೆ ಒತ್ತುವರಿಗಳನ್ನು ಗುರುತಿಸಲಾಗಿದ್ದು, ಇಲ್ಲಿಯವರೆಗೆ 44 ಒತ್ತುವರಿಗಳನ್ನು ತೆರವುಗೊಳಿಸಲಾಗಿದ್ದು, ಬಾಕಿ ಉಳಿದಿರುವ 121 ಒತ್ತುವರಿಗಳನ್ನು ಹಂತ ಹಂತವಾಗಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಈ	ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಜಕಾಲುವೆಯಿಂದ ನೀರು ನುಗ್ಗಿ ಸಂಕಷ್ಟಕ್ಕೆ ಒಳಗಾಗಿರುವವರಿಗೆ ಈವರೆಗೆ ಎಷ್ಟು ಮೊತ್ತದ ಪರಿಹಾರವನ್ನು ವಿತರಿಸಲಾಗಿದೆ; ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)	ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ 2020-21ನೇ ಸಾಲಿನಲ್ಲಿ ಈವರೆಗೆ ರೂ. 1,63,000-00ಗಳ ಮಳೆ ಪರಿಹಾರ ಮೊತ್ತವನ್ನು ವಿತರಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ಸದರಿ ಸಮಸ್ಯೆಯನ್ನು ನಿವಾರಿಸಲು ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ ಅಡಿಯಲ್ಲಿ ರೂ. 16.54 ಕೋಟಿಗಳಷ್ಟು ಹಣವನ್ನು ಬೃಹತ್ ನೀರುಗಾಲುವೆಗೆ ಆರ್.ಸಿ.ಸಿ ತಡೆಗೋಡೆ ನಿರ್ಮಿಸಲು ಅನುದಾನ ನೀಡಲಾಗಿದ್ದು, ಬೃಹತ್ ನೀರುಗಾಲುವೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

H.P

		ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ರೂ.7.00 ಕೋಟಿಗಳ ಅನುದಾನ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಕಾಮಗಾರಿಯ ಸಂಪೂರ್ಣ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

20.3.21

ವಿಶೇಷ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3297

ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)

ಉತ್ತರಿಸುವ ದಿನಾಂಕ : 23.03.2021

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಯಾವ ವರ್ಷದಿಂದ ನೇಮಕಗೊಂಡ ನೌಕರರನ್ನು ಎನ್.ಪಿ.ಎಸ್. ಯೋಜನೆಯ ವ್ಯಾಪ್ತಿಗೆ ತರಲಾಗಿದೆ;	ಸರ್ಕಾರದ ಆದೇಶದ ಸಂಖ್ಯೆ: ಆಇ (ವಿ) 04 ಪಿ.ಇ.ಟಿ. 2005, ದಿನಾಂಕ: 31.03.2006 ರನ್ವಯ ದಿನಾಂಕ: 01.04.2006 ರಂದು ಮತ್ತು ತದನಂತರ ಸೇವೆಗೆ ಸೇರುವ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಸರ್ಕಾರದಿಂದ ಜಾರಿಗೊಳಿಸಲಾಗಿದೆ.
ಆ)	ಸದರಿ ಯೋಜನೆಯು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಇಲಾಖಾವಾರು ನೇಮಕಾತಿ ಮಾಡಿಕೊಂಡ ನೌಕರರ ಸಂಖ್ಯೆ ಎಷ್ಟು;	ದಿನಾಂಕ: 01.04.2006 ರಿಂದ ನೇಮಕಾತಿ ಹೊಂದಿ ನೂತನ ಪಿಂಚಣಿ ಯೋಜನೆಗೆ ಒಳಪಟ್ಟು ಕೇಂದ್ರ ನಿಯಂತ್ರಣ ಪ್ರಾಧಿಕಾರ (Central Regulatory Authority) ರವರಲ್ಲಿ ದಿನಾಂಕ:01.03.2021ರವರೆಗೆ ನೋಂದಣಿಯಾಗಿರುವ ನೌಕರರ ಸಂಖ್ಯೆ: 2,41,672. ಇಲಾಖಾವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ.
ಇ)	ಈ ಬಗ್ಗೆ ಸರ್ಕಾರ ಹೊರಡಿಸಿರುವ ಹೊಸ ಪಿಂಚಣಿ ನಿಯಮಗಳ ರೂಪು-ರೇಷೆಗಳೇನು? (ವಿವರ ನೀಡುವುದು)	ನೂತನ ಪಿಂಚಣಿ ಯೋಜನೆಯಡಿ ಸೇವೆಗೆ ಸೇರಿದ ನೌಕರರು ನಂತರ ಕೆ.ಜಿ.ಐ.ಡಿ. ಸಂಖ್ಯೆ ಪಡೆದು ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆಯಲ್ಲಿ ಸೇವಾ ಪುಸ್ತಕವನ್ನು ಸೃಜಿಸಿ, CSRF-1.2 ಸಾಮಾನ್ಯ ಚಂದಾದಾರರ ನೋಂದಣಿ ನಮೂನೆ (Common subscriber registration Form) ಆನ್ ಲೈನ್ ಮೂಲಕ ಸಲ್ಲಿಸಿ, ಕೇಂದ್ರ ನಿಯಂತ್ರಣ ಪ್ರಾಧಿಕಾರ (Central Regulatory Authority) ರವರಿಂದ 12 ಅಂಕಿಗಳ ಪ್ರಾನ್ ಸಂಖ್ಯೆ ಪಡೆಯಲಾಗುತ್ತದೆ. ತದನಂತರ ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆಯಲ್ಲಿ ವೇತನ ಬಿಲ್ಲನ್ನು ಸಿದ್ಧ ಪಡಿಸುವಾಗ ನೌಕರರ ನೂತನ ಪಿಂಚಣಿ ಯೋಜನೆ ವಂತಿಗೆ (ಮೂಲವೇತನ+ತುಟ್ಟಿಭತ್ಯೆ) ಶೇ. 10 ರಷ್ಟು ವೇತನದಿಂದ ಕಟಾವಣೆಯಾಗುತ್ತದೆ. ಇದಕ್ಕೆ ಖಜಾನೆಯಿಂದ ಸರ್ಕಾರದ ಶೇ 14 ರಷ್ಟು ವಂತಿಗೆಯನ್ನು ಸೇರಿಸಿ, ಕೇಂದ್ರ ನಿಯಂತ್ರಣ ಪ್ರಾಧಿಕಾರ (Central Regulatory Authority) ರವರಲ್ಲಿ ತೆರೆದಿರುವ ಪ್ರಾನ್ ಖಾತೆಗೆ ಜಮಾ ಮಾಡಲಾಗುತ್ತಿದೆ. ತದನಂತರ ಸದರಿ ಮೊತ್ತವನ್ನು ನೂತನ ಪಿಂಚಣಿ ಯೋಜನೆಯ ಟ್ರಸ್ಟ್ ನಿಂದ ನೇಮಿಸಿರುವ ಪಿಂಚಣಿ ನಿಧಿ

ನಿರ್ವಾಹಕರಲ್ಲಿ PFM (Pension Fund Manager) ಈ ಕೆಳಕಂಡಂತೆ ಹೂಡಿಕೆ ಮಾಡಲಾಗುತ್ತಿದೆ.

ಕ್ರ. ಸಂ	ಪಿ.ಎಫ್.ಎಂ. ವಿವರ	ಶೇಕಡ ವಾರು ವಿವರ
1	ಎಸ್.ಬಿ.ಐ.	38.50%
2	ಎಲ್.ಐ.ಸಿ.	29.50%
3	ಯು.ಟಿ.ಐ.	32.00%

ನೂತನ ಪಿಂಚಣಿ ಯೋಜನೆಯಡಿ ಇರುವ ಪ್ರಯೋಜನಗಳ ವಿವರ ಕೆಳಕಂಡಂತಿದೆ.

1. ನೂತನ ಪಿಂಚಣಿ ಯೋಜನೆಯಡಿ ನೌಕರರು ಸೇವೆಯಿಂದ ನಿವೃತರಾಗುವ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆಇ/34/ಪಿ.ಇ.ಎನ್/2018, ಬೆಂಗಳೂರು ದಿನಾಂಕ:23.06.2018, ರನ್ವಯ ನಿವೃತ್ತಿ ಉಪದಾನವನ್ನು ದಿನಾಂಕ: 01.04.2018 ರಿಂದ ಜಾರಿಗೊಳಿಸಲಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ (ಎಸ್.ಪಿ.ಎಲ್) 203 ಪಿಇಎನ್2012 (ಪಿ), ದಿನಾಂಕ: 18.05.2016 ರಂತೆ ನೂತನ ಪಿಂಚಣಿ ಯೋಜನೆಯಡಿ ನೌಕರರು ನಿವೃತ್ತರಾದರೆ/ಸೇವೆಯಲ್ಲಿರುವಾಗಲೇ ಮೃತರಾದರೆ/ರಾಜೀನಾಮೆ ನೀಡಿದ ಸಂದರ್ಭದಲ್ಲಿ ಅವರುಗಳ ಪ್ರಾನ್ ಖಾತೆಯಲ್ಲಿನ ಮೊತ್ತವನ್ನು ಈ ಕೆಳಕಂಡಂತೆ ಇತ್ಯರ್ಥಪಡಿಸಲಾಗುವುದು.

a) ನೂತನ ಪಿಂಚಣಿ ಯೋಜನೆಯಡಿ ನಿವೃತ್ತಿ ಹೊಂದಿದ ನೌಕರರ ಪ್ರಾನ್ ಖಾತೆಯಲ್ಲಿ 2.00 ಲಕ್ಷಕ್ಕಿಂತ ಕಡಿಮೆ ಮೊತ್ತವಿದ್ದರೆ ನೌಕರರಿಗೆ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು. ಹಾಗೂ ಪ್ರಾನ್ ಖಾತೆಯಲ್ಲಿನ ಮೊತ್ತವು ಎರಡು ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ ಪ್ರಾನ್ ಖಾತೆಯಲ್ಲಿರುವ 60% ಮೊತ್ತವನ್ನು ನೌಕರರು ಹಿಂಪಡೆಯಬಹುದಾಗಿದ್ದು ಉಳಿದ 40% ಮೊತ್ತವನ್ನು ಕಡ್ಡಾಯವಾಗಿ Annuity Service Provider ಯಲ್ಲಿ ಹೂಡಿಕೆ ಮಾಡಿ ಮಾಸಿಕ ಪಿಂಚಣಿ ಪಡೆಯಬೇಕಿರುತ್ತದೆ.

b) ನೂತನ ಪಿಂಚಣಿ ಯೋಜನೆಯಡಿ ಸೇವೆಗೆ ರಾಜೀನಾಮೆ ನೀಡಿದ ನೌಕರರ ಪ್ರಾನ್ ಖಾತೆಯಲ್ಲಿ 1.00 ಲಕ್ಷಕ್ಕಿಂತ ಕಡಿಮೆ ಮೊತ್ತವಿದ್ದರೆ ನೌಕರರ ಪ್ರಾನ್

		ಖಾತೆಯಲ್ಲಿನ ಸಂಪೂರ್ಣ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು. ನೌಕರರ ಪ್ರಾನ್ ಖಾತೆಯಲ್ಲಿನ ಮೊತ್ತವು ರೂ. 1.00 ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ ಶೇ.20% ರಷ್ಟು ಮೊತ್ತವನ್ನು ನೌಕರರು ಹಿಂಪಡೆಯಬಹುದಾಗಿದ್ದು. ಉಳಿಕೆ ಶೇ. 80% ಮೊತ್ತವನ್ನು ಕಡ್ಡಾಯವಾಗಿ Annuity Service Provider ಯಲ್ಲಿ ಹೂಡಿಕೆ ಮಾಡಿ ಮಾಸಿಕ ಪಿಂಚಣಿ ಪಡೆಯಬೇಕಿರುತ್ತದೆ. c) ನೌಕರರು ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಪ್ರಾನ್ ಖಾತೆಯಲ್ಲಿ 2.00 ಲಕ್ಷಕ್ಕಿಂತ ಕಡಿಮೆ ಮೊತ್ತವಿದ್ದರೆ, ಮೃತರ ನಾಮನಿರ್ದೇಶಿತರಿಗೆ ಸಂಪೂರ್ಣ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು. ಪ್ರಾನ್ ಖಾತೆಯಲ್ಲಿನ ಮೊತ್ತವು 2 ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ ಪ್ರಾನ್ ಖಾತೆಯಲ್ಲಿರುವ 20% ರಷ್ಟು ಮೊತ್ತವನ್ನು ಮೃತರ ನಾಮನಿರ್ದೇಶಿತರಿಗೆ ಇತ್ಯರ್ಥಪಡಿಸಲಾಗುವುದು ಹಾಗೂ 80% ರಷ್ಟು ಮೊತ್ತವು ಕಡ್ಡಾಯವಾಗಿ Annuity Service Provider ಯಲ್ಲಿ ಹೂಡಿಕೆ ಮಾಡಿ ಮಾಸಿಕ ಪಿಂಚಣಿ ಪಡೆಯಬೇಕಿರುತ್ತದೆ. 3. ನೂತನ ಪಿಂಚಣಿ ಯೋಜನೆಯಡಿ ನೌಕರರು ಸೇವೆಯಲ್ಲಿರುವಾಗಲೇ ಮೃತರಾದರೆ ಸರ್ಕಾರದಿಂದ ನೌಕರರ ಕುಟುಂಬಕ್ಕೆ ಈ ಕೆಳಕಂಡ ಸೌಲಭ್ಯವನ್ನು ನೀಡಲಾಗುವುದು. **a) ಇಡಿಗಂಟಿನಪರಿಹಾರ:** ದಿನಾಂಕ: 31.03.2018ರವರೆಗೆ ಸೇವೆಯಲ್ಲಿರುವಾಗಲೇ ಮೃತರಾದ ಸರ್ಕಾರಿ ನೌಕರರ ಕುಟುಂಬಕ್ಕೆ ಇಡಿಗಂಟಿನ ಪರಿಹಾರವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ/03/ಸೇನಿಸೇ/2010 ದಿನಾಂಕ: 12.10.2010, 15.10.2011 ರನ್ವಯ ನೀಡಲಾಗುವುದು. b) ದಿನಾಂಕ: 01.04.2018 ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ ಸರ್ಕಾರಿ ನೌಕರರ ಕುಟುಂಬಕ್ಕೆ ಮರಣ ಉಪದಾನವನ್ನು ಸರ್ಕಾರದ ಆದೇಶ: ಸಂಖ್ಯೆ: ಆಇ/34/ಪಿ.ಇ.ಎನ್/2018, ಬೆಂಗಳೂರು ದಿನಾಂಕ: 23.06.2018, ರನ್ವಯ ನೀಡಲಾಗುವುದು.

		c).ದಿನಾಂಕ: 01.04.2018ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ನಾಮನಿರ್ದೇಶಿತರು ಸರ್ಕಾರದ ಆದೇಶ ಸಂಖ್ಯೆ: ಆಇ/34/ಪಿ.ಇ.ಎನ್/2018, ಬೆಂಗಳೂರು ದಿನಾಂಕ: 23.06.2018, ರನ್ವಯ ಪ್ರಾನ್ ಖಾತೆಯಲ್ಲಿ ಕ್ರೋಢೀಕೃತವಾಗಿರುವ ಸಂಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡಿ "ಕುಟುಂಬ ಪಿಂಚಣಿ ನಿಯಮಗಳು, 2002" ರನ್ವಯ ಕುಟುಂಬ ಪಿಂಚಣಿಯನ್ನು ಪಡೆಯಬಹುದು. ಈ ಆಯ್ಕೆಯು ಐಚ್ಛಿಕವಾಗಿದ್ದು, ಒಮ್ಮೆ ಮಾಡಿಕೊಂಡ ಆಯ್ಕೆಯನ್ನು ಬದಲಿಸಲು ಅವಕಾಶವಿರುವುದಿಲ್ಲ. 4.ಎನ್.ಪಿ.ಎಸ್ ನೌಕರರಿಗೆ ಆರ್ಥಿಕವಾಗಿ ಅನುಕೂಲವಾಗಲೆಂದು Tier-1 ಪ್ರಾನ್ ಖಾತೆಯಿಂದ ಭಾಗಶಃ ಮೊತ್ತವನ್ನು ಹಿಂಪಡೆಯಲು ಸರ್ಕಾರದ ಆದೇಶಸಂ: FD (SPL) 69 PEN 2016 ದಿನಾಂಕ:26.06.2018ರಲ್ಲಿ ಆದೇಶಿಸಲಾಗಿದೆ. ಸದರಿ ಆದೇಶದ ಅನ್ವಯ 3ವರ್ಷದ ಸೇವೆಯನ್ನು ಪೂರೈಸಿದ ಎನ್.ಪಿ.ಎಸ್ ನೌಕರನ ವಂತಿಗೆಯ ಶೇ.25% ಮೊತ್ತವನ್ನು (ಹೂಡಿಕೆ ಮೇಲಿನ ಆದಾಯವನ್ನು ಹೊರತುಪಡಿಸಿ) ಕೆಳಕಾಣಿಸಿದ ಸಂದರ್ಭಗಳಲ್ಲಿ ಮಾತ್ರ ಹಿಂಪಡೆಯಬಹುದಾಗಿರುತ್ತದೆ. 1. ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ 2. ಮಕ್ಕಳ ಮದುವೆಯ ಸಂಬಂಧ 3. ಗೃಹ ನಿರ್ಮಾಣ/ ಖರೀದಿ ಸಂಬಂಧ 4. ವೈದ್ಯಕೀಯ ಕಾರಣ ನಿಮಿತ್ತ 5. ನೌಕರರ ವೃತ್ತಿ ಕೌಶಲತೆ ಹೆಚ್ಚಿಸಿಕೊಳ್ಳಲು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಈ ರೀತಿಸೇವಾ ಅವಧಿಯಲ್ಲಿ ಮೂರು ಬಾರಿ ಭಾಗಶಃ ಹಣ ಹಿಂಪಡೆಯಲು ಅವಕಾಶವಿರುತ್ತದೆ.

ಆಇ 59 ಪಿಇಎನ್ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಎಸ್. ಎನ್. ನಾರಾಯಣಸ್ವಾಮಿ ಕೆ. ಎಂ. (ಬಂಗಾರ ಪೇಟೆ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:3297ಕ್ಕೆ ಅನುಬಂಧ

ಇಲಾಖಾವಾರು ನೌಕರರ ವಿವರ

ಕ್ರ.ಸಂ.	ಇಲಾಖೆಯ ಹೆಸರು	ನೌಕರರ ಸಂಖ್ಯೆ:
1	ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ	51
2	ಆಡಳಿತ ತರಬೇತಿ ಸಂಸ್ಥೆ	96
3	ಕೃಷಿ ಇಲಾಖೆ	2557
4	ಆಯುಷ್ ಇಲಾಖೆ	662
5	ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರೇಟ್	155
6	ಆದಾಯ ತೆರಿಗೆ ಇಲಾಖೆ	1396
7	ಕಾನೂನು ಮೆಟ್ರೋಲಜಿ ನಿಯಂತ್ರಕರು	80
8	ಸಹಕಾರ ಇಲಾಖೆ	706
9	ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ	12308
10	ವಿಪತ್ತು ಪ್ರತಿಕ್ರಿಯೆ	31
11	ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ	10
12	ಪುರ ಸಭೆ ಆಡಳಿತ ನಿರ್ದೇಶನಾಲಯ	115
13	ಸಿಬ್ಬಂದಿ ಮತ್ತುಆಡಳಿತ ಸುಧಾರಣೆ ಇಲಾಖೆ	1594
14	ಔಷಧ ನಿಯಂತ್ರಣ ಇಲಾಖೆ	297
15	ಆರ್ಥಿಕ ಸಾಂಖ್ಯಿಕ ಇಲಾಖೆ	323
16	ಶಿಕ್ಷಣ ಇಲಾಖೆ	74950
17	ಚುನಾವಣೆ	3
18	ಉದ್ಯೋಗ ಮತ್ತು ತರಬೇತಿ ಇಲಾಖೆ	993
19	ಕಾರ್ಖಾನೆ ಮತ್ತು ಬಾಯ್ಲರ್ಸ್ ಇಲಾಖೆ	57
20	ಆರ್ಥಿಕ ನೀತಿ ಸಂಸ್ಥೆ ಇಲಾಖೆ	3
21	ಅಗ್ನಿ ಶಾಮಕ ಸೇವೆಗಳು	2948
22	ಮೀನುಗಾರಿಕೆ ಇಲಾಖೆ.	382
23	ಆಹಾರ ಮತ್ತು ನಾಗರೀಕ ಸರಬರಾಜು, ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.	172
24	ಅರಣ್ಯ ಇಲಾಖೆ	6057
25	ಸರ್ಕಾರಿ ಮುದ್ರಣಾಲಯ	183
26	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.	22547
27	ತೋಟಗಾರಿಕೆ ಮತ್ತು	2075
28	ಮಾನವ ಹಕ್ಕುಗಳ ಆಯೋಗ	7
29	ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ.	183
30	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ	87
31	ಜಲಸಂಪನ್ಮೂಲ ಇಲಾಖೆ	584
32	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	34
33	ಕರ್ನಾಟಕ ರಾಜ್ಯ ಪತ್ರ ಇಲಾಖೆ	4
34	ಕರ್ನಾಟಕ ಗುಂಪು ವಿಮಾ ಇಲಾಖೆ	691
35	ಕರ್ನಾಟಕ ಲೋಕಸೇವಾ ಆಯೋಗ	100

36	ಕಾರ್ಮಿಕ ಇಲಾಖೆ	142
37	ಕರ್ನಾಟಕ ವಿಧಾನ ಸಭೆ ಸಚಿವಾಲಯ	447
38	ಗ್ರಂಥಾಲಯ ಇಲಾಖೆ	533
39	ಲೋಕಾಯುಕ್ತ ಇಲಾಖೆ	395
40	ಗಣಿ ಮತ್ತು ಭೂ ವಿಜ್ಞಾನ ಇಲಾಖೆ	375
41	ಸಣ್ಣ ನೀರಾವರಿ ಇಲಾಖೆ	431
42	ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ	5947
43	ಮುಜರಾಯಿ ಇಲಾಖೆ	52
44	ಎನ್.ಸಿ.ಸಿ.ಇಲಾಖೆ	274
45	ಐಜಿಪಿ ಮೆಟ್ರೊಪಾಲಿಟನ್ ಟಾಸ್ಕ್ ಫೋರ್ಸ್ ಇಲಾಖೆ	13
46	ನಿವಾಸಿ ಆಯುಕ್ತರು, ಕರ್ನಾಟಕ ಭವನ ಕಚೇರಿ, ನವದೆಹಲಿ	30
47	ಒಳಾಡಳಿತ ಇಲಾಖೆ.	56942
48	ಲೋಕೋಪಯೋಗಿ ಇಲಾಖೆ	3010
49	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	12098
50	ಕಂದಾಯ ಇಲಾಖೆ	11075
51	ಕಾರ್ಯದರ್ಶಿ, ರಾಜಭವನ ಸಚಿವಾಲಯ	49
52	ರೇಷ್ಮೆ ಇಲಾಖೆ	364
53	ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆ	91
54	ಸಮಾಜ ಕಲ್ಯಾಣ ಇಲಾಖೆ	4437
55	ಅಂಚೆ ಚೀಟಿಗಳು ಮತ್ತು ನೋಂದಣಿ ಇಲಾಖೆ	412
56	ರಾಜ್ಯ ಲೆಕ್ಕಪರಿಶೋಧನಾ ಇಲಾಖೆ	435
57	ರಾಜ್ಯ ಚುನಾವಣಾ ಆಯೋಗ	9
58	ರಾಜ್ಯ ಅಬಕಾರಿ ಇಲಾಖೆ	2189
59	ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ	89
60	ಸರ್ವೆ ಸೆಟಲ್ಮೆಂಟ್ ಲ್ಯಾಂಡ್ ರೆಕಾರ್ಡ್ಸ್ ಇಲಾಖೆ	3458
61	ಜವಳಿ ಮತ್ತು ಕೈಮಗ್ಗ ಇಲಾಖೆ	69
62	ಪ್ರವಾಸೋದ್ಯಮ ಇಲಾಖೆ	28
63	ನಗರ ಯೋಜನಾ ಇಲಾಖೆ	229
64	ಭಾಷಾಂತರ ಇಲಾಖೆ	40
65	ಸಾರಿಗೆ ಇಲಾಖೆ	555
66	ಖಜಾನೆ ಇಲಾಖೆ	913
67	ಬುಡಕಟ್ಟು ಕಲ್ಯಾಣ ಇಲಾಖೆ	108
68	ಪಶುಸಂಗೋಪನಾ ಇಲಾಖೆ	3302
69	ಜಲನಯನ ಅಭಿವೃದ್ಧಿ ಇಲಾಖೆ	629
70	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ	61
	ಒಟ್ಟು	**241672**

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3303
2.	ಸದಸ್ಯರ ಹೆಸರು	:	ಮಾನ್ಯ ಅಜಯ್ ಧರ್ಮಸಿಂಗ್ (ಜೇವರ್ಗಿ)
3.	ಉತ್ತರಿಸಬೇಕಾದ ದಿನಾಂಕ	:	23.03.2021
4.	ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

ಪ್ರಶ್ನೆ	ಉತ್ತರ
ಅ)2018 ರಿಂದ 2020ರವರೆಗೆ ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ(ಕೆ.ಎಸ್.ಎಫ್.ಸಿ) ಓ.ಟಿ.ಎಸ್./ಎಂ.ಸಿ.ಎ.ಆರ್ ಯೋಜನೆಯಡಿ ಎಷ್ಟು ಮಂದಿ ಫಲಾನುಭವಿಗಳು ಸಾಲ ಸೌಲಭ್ಯ ಪಡೆದಿದ್ದಾರೆ:(ವಿವರವನ್ನು ಜಿಲ್ಲಾವಾರು ನೀಡುವುದು);	2018 ರಿಂದ 2020ರವರೆಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಓ.ಟಿ.ಎಸ್. / ಎಂ.ಸಿ.ಎ.ಆರ್. ಯೋಜನೆಯಡಿ ಒಟ್ಟು 13 ಘಟಕಗಳು ಸಾಲ ತೀರುವಳಿ ಮಾಡಿದ್ದು, ಘಟಕಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಆ)ಪ್ರಧಾನ ಮೊತ್ತ (Principal Amount) ಲೆಕ್ಕಾಚಾರ ಮಾಡಿ ಸದರಿ ಸೌಲಭ್ಯವನ್ನು ಎಷ್ಟು ಮಂದಿ ಫಲಾನುಭವಿಗಳಿಗೆ ನೀಡಲಾಗಿದೆ: (ವಿವರ ನೀಡುವುದು)	ಬಾಕಿ ಇರುವ ಅಸಲಿನ (Principal) ಆಧಾರದ ಮೇಲೆ 1 ಘಟಕಕ್ಕೆ ಓ.ಟಿ.ಎಸ್. / ಎಂ.ಸಿ.ಎ.ಆರ್. ಯೋಜನೆಯಡಿ ಸೌಲಭ್ಯ ನೀಡಲಾಗಿದ್ದು ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಇ) ಈ ಸೌಲಭ್ಯವನ್ನು ಅಂತಿಮಗೊಳಿಸುವಾಗ ಸರಳ ಬಡ್ಡಿ ಆಧಾರದ ಮೇಲೆ ಹಾಗೂ ಫಲಾನುಭವಿಗಳ ಮತ್ತು ಜಾಮೀನುದಾರರಿಗೆ ಭದ್ರತಾ ಠೇವಣಿ ಮೊತ್ತವನ್ನು ನಿಗಧಿಪಡಿಸಲಾಗಿರುವುದೇ;	MCAR ಯೋಜನೆಯಡಿಯಲ್ಲಿ OTS ಸೌಲಭ್ಯವನ್ನು ಅಂತಿಮಗೊಳಿಸುವಾಗ ವಿತರಣೆಯಾಗಿರುವ ಸಾಲ, ಮರುಪಾವತಿ ಮಾಡಿದ ಹಣ, ಬಡ್ಡಿದರ, ಉದ್ಯಮ ವಿಫಲತೆಗೆ ಕಾರಣ, ಪ್ರಾಥಮಿಕ ಭದ್ರತೆಯಾಗಿ ನೀಡಿದ ಆಸ್ತಿಗಳು ಮತ್ತು ಪೂರಕ ಭದ್ರತೆಯಾಗಿ ನೀಡಿರುವ ಆಸ್ತಿಯ ಮೌಲ್ಯ ಹಾಗೂ ವೈಯಕ್ತಿಕ ಖಾತರಿದಾರರ ಆಸ್ತಿ ಈ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ನಿಗಧಿಪಡಿಸಲಾಗಿದೆ.

12

ಪ್ರಶ್ನೆ	ಉತ್ತರ
ಈ) ನಿಯಮ 32 (ಜಿ) ಹಾಗೂ 31 (ಎ) ರಡಿಯಲ್ಲಿ 2012ರಿಂದ 2020ರವರೆಗೆ ಎಷ್ಟು ಮಂದಿ ಆಸ್ತಿಯನ್ನು (ಪ್ರಾಪರ್ಟಿ) ಮಾರಿರುತ್ತಾರೆ, ಮಾರಿದ್ದಲ್ಲಿ ಅವರುಗಳ ವಿವರ ಒದಗಿಸುವುದು.	ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ರಾಜ್ಯ ಹಣಕಾಸು ಸಂಸ್ಥೆ ನಿಯಮ 32 (ಜಿ) ಹಾಗೂ 31(1)(ಎ)(ಎ) 2012 ರಿಂದ 2020ರವರೆಗೆ ಒಟ್ಟು 6 ಘಟಕಗಳಿಗೆ ಸಂಬಂಧಿಸಿದ ಆಸ್ತಿಗಳನ್ನು ಹರಾಜು ಮಾಡಿದ್ದು, ಅವುಗಳ ವಿವರ ಅನುಬಂಧ-3ರಲ್ಲಿ ನೀಡಲಾಗಿದೆ. .
ಉ) ಸಾಲ ಪಡೆದ ಫಲಾನುಭವಿಗಳ ಪೈಕಿ ಎಷ್ಟು ಮಂದಿ ಡಿ.ಆರ್.ಟಿ.ಯ ಮೊರೆ ಹೋಗಿದ್ದಾರೆ; ಇದರಲ್ಲಿ ಎಷ್ಟು ಪ್ರಕರಣಗಳು ಯಾವ ಮೊತ್ತಕ್ಕೆ ಇತ್ಯರ್ಥವಾಗಿರುತ್ತವೆ?	ಸಾಲ ಪಡೆದ ಫಲಾನುಭವಿಗಳ ಪೈಕಿ 12 ಫಲಾನುಭವಿಗಳು ಡಿ.ಆರ್.ಟಿ.ಯ ಮೊರೆ ಹೋಗಿದ್ದು, ಯಾವುದೇ ಪ್ರಕರಣಗಳು ಇದುವರೆಗೂ ಇತ್ಯರ್ಥವಾಗಿರುವುದಿಲ್ಲ.

ಆಇ 07 ಬಿಎಫ್ ಸಿ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಅನುಬಂಧ–1

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

2018ರಿಂದ ಮಾರ್ಚ್ 2020ರವರೆಗೆ (ಎಂಕಾರ್) ಯೋಜನೆಯಡಿಯಲ್ಲಿ ಓ.ಟಿ.ಎಸ್. ಪಡೆದ ಫಲಾನುಭವಿಗಳ ವಿವರಗಳು

(GoK ಓ.ಟಿ.ಎಸ್. ಹೊರತುಪಡಿಸಿ)

(ಮೊತ್ತ ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲೆ	ಘಟಕದ ಹೆಸರು	ವಿತರಣೆ ಮೊತ್ತ	ಓ.ಟಿ.ಎಸ್. ದಿನಾಂಕ	ಓ.ಟಿ.ಎಸ್. ಮೊತ್ತ	ಓ.ಟಿ.ಎಸ್. ಮುನ್ನ ವಸೂಲಾತಿ	ಓ.ಟಿ.ಎಸ್. ನಂತರ ವಸೂಲಾತಿ	ಒಟ್ಟು ವಸೂಲಾತಿ
1	ಚಿಕ್ಕಬಳ್ಳಾಪುರ	ಕೃಷ್ಣಪ್ಪ ಎಂ. (ಕೆ.ಎ.–07/2190)	10,53,000	03-Jan-18	10,31,165	18,63,985	11,60,800	30,24,785
2	ದಕ್ಷಿಣ ಕನ್ನಡ	ತಿರುಪತಿ ಸ್ಟೋನ್ ಇಂಡಸ್ಟ್ರೀಸ್	41,50,000	09-Mar-18	80,00,000	66,11,242	80,00,000	1,46,11,242
3	ಗದಗ	ಶಿವಾನಂದ್ ಆರ್. ನಾಯಕ್	1,96,000	09-Mar-18	70,000	1,16,458	70,000	1,86,458
4	ಬೆಂಗಳೂರು ನಗರ	ಬಿಇ ಅನ್‌ಲೈನ್ (ಇಂಡಿಯಾ) ಲಿಮಿಟೆಡ್	19,88,527	18-Jun-18	60,09,180	16,44,176	60,09,180	76,53,356
5	ಬೀದರ್	ಕಾರಂಜಾ ಫುಟ್ ವೇರ್ ಇಂಡಸ್ಟ್ರೀಸ್	9,90,782	18-Jun-18	5,00,000	5,27,415	5,01,400	10,28,815
6	ತುಮಕೂರು	ಎಂಜೀಸ್ ಕನ್‌ವೆನ್‌ಷನ್ ಹಾಲ್	52,00,000	29-Aug-18	85,88,259	26,62,589	86,01,240	1,12,63,829
7	ತುಮಕೂರು	ಶ್ರೀ ರೇವಣ್ಣಸಿದ್ದೇಶ್ವರಸ್ವಾಮಿ	27,45,000	28-Feb-19	5,00,000	26,84,331	5,00,000	31,84,331
8	ಬಳ್ಳಾರಿ	ರಾಯಲ್ ಪ್ಯಾಕೇಜಿಂಗ್ ಇಂಡಸ್ಟ್ರೀಸ್	18,72,698	31-Mar-19	8,63,189	17,18,650	8,63,189	25,81,839
9	ಗದಗ	ವೇಲ್‌ಜೀ ಮೂಲ್‌ಜೀ ಕಾಟನ್ ಅಂಡ್ ಆಯಿಲ್ ಪ್ರೈ.ಲಿ.	1,07,14,000	20-May-19	2,36,25,000	3,11,84,929	77,715	3,12,62,644
10	ಹಾಸನ	ಎಸ್.ಎಫ್. ಅನರಲ್ ಇಂಜಿನೀಯರಿಂಗ್ ವರ್ಕ್ಸ್	2,00,000	29-Jun-19	10,000	99,500	10,000	1,09,500
11	ತುಮಕೂರು	ಕನ್ನಿಕಾ ಪರಮೇಶ್ವರಿ ಇಂಡಸ್ಟ್ರೀಸ್	30,33,000	24-Oct-19	4,61,250	33,90,885	4,61,250	38,52,135
12	ತುಮಕೂರು	ವೆಂಕಟೇಶ್ವರ ಎಂಟರ್‌ಪ್ರೈಸಸ್	76,85,000	24-Oct-19	5,26,000	74,33,952	5,26,000	79,59,952
13	ತುಮಕೂರು	ಬಸವೇಶ್ವರ ರೈಸ್ ಮಿಲ್	22,25,000	14-Nov-19	2,75,000	48,32,424	3,67,013	51,99,437
		ಒಟ್ಟು ಮೊತ್ತ	**4,20,53,007**		**5,04,59,043**	**6,47,70,536**	**2,71,47,787**	**9,19,18,323**

ಅನುಬಂಧ-2

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

2018ರಿಂದ ಮಾರ್ಚ್ 2020ರವರೆಗೆ (ಎಂಕಾರ್) ಯೋಜನೆಯಡಿಯಲ್ಲಿ ಅಸಲು ಮತ್ತು ಇತರೆ ವೆಚ್ಚದ ಆಧಾರದ ಮೇಲೆ ಓ.ಟಿ.ಎಸ್. ಪಡೆದ ಫಲಾನುಭವಿಗಳ ವಿವರಗಳು

(GoK ಓ.ಟಿ.ಎಸ್. ಹೊರತುಪಡಿಸಿ)

(ಮೊತ್ತ ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲೆ	ಘಟಕದ ಹೆಸರು	ವಿತರಣೆ ಮೊತ್ತ	ಓ.ಟಿ.ಎಸ್. ದಿನಾಂಕ	ಓ.ಟಿ.ಎಸ್. ಮೊತ್ತ	ಓ.ಟಿ.ಎಸ್. ಮುನ್ನ ವಸೂಲಾತಿ	ಓ.ಟಿ.ಎಸ್. ನಂತರ ವಸೂಲಾತಿ	ಒಟ್ಟು ವಸೂಲಾತಿ
1	ಬಳ್ಳಾರಿ	ರಾಯಲ್ ಪ್ಯಾಕೇಜಿಂಗ್ ಇಂಡಸ್ಟ್ರೀಸ್	18,72,698	31-Mar-19	8,63,189	17,18,650	8,63,189	25,81,839
		ಒಟ್ಟು ಮೊತ್ತ	**18,72,698**		**8,63,189**	**17,18,650**	**8,63,189**	**25,81,839**

Annexure-3

Karnataka State Financial Corporation

A) Statement showing Assets sold under section 32(g) of the SFCs Act 1951 for the period 01/04/2012 to 31/03/2020

Sl No	Name of the Unit	Details of the properties attached and sold	Amount & date of realization *(Rs.in lakh)*
01	Anjaneya Table Bricks, Bengaluru	Residential property measuring 35' x 60' at Singaiahnapalya, KR Puram, Mahadevapura Post, Bengaluru.	44.40 21.12.2012
02	Arkavathi Silk Reeling, Ramanagar	1.The tiled roof building measuring 15' x 30' situated at Sy.No.702, 3rd Division, AVR Road, JC Extension, Kanakapura Taluk, Ramanagar District. (Collateral security)	7.60 02.02.2019
		2. Two storeyed RCC building measuring 15'x30' at Khata No.6545/5651 AVR Road, JC Extension, Kanakapura Taluk, Ramanagar District. (Primary security)	18.60 08.02.2019
03	Naveen Chemicals, Dakshina Kannada.	Property No.76 measuring 3 cents situated at Badagabettu, Chitpadi, Udupi, Mangaluru District.	124.00 30.10.2014
04	Rajesh Rig Service, Kolar	Agriculture property measuring 1 acre 2 guntas, Kolar Taluk & District.	13.80 December 2012
05	Venkateshwara Industries, Doddabanasawadi, Mandya	Residential building measuring 70'x21' bearing No.66/1A & Residential site measuring 22'x65' at No.180 situated at Doddabanasawadi, Keragodu hobli, Mandya Tq. & Dist.	2.27 18.11.2014

Contd…2

B)Statement showing Assets sold under section 31(1)(a)(a) of the SFCs Act 1951for the period 01/04/2012 to 31/03/2020

Sl No	Name of the Unit	Details of the properties attached and sold	Amount & date of realization (Rs.in lakh)
01	Professional Readymade Garments, Dakshina Kannada	Property bearing Sy.No.113/6A, measuring 44 cents, Near Railway Station Road, Puttur, Dakshina Kannada.	61.00 06.07.2018

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3318

ಉತ್ತರಿಸಬೇಕಾದ ದಿನಾಂಕ : 23/03/2021.

ಸದಸ್ಯರ ಹೆಸರು : ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಯೋಜನೆ ಮತ್ತು ಕಾಮಗಾರಿಗಳು ಯಾವುವು; ಆ ಯೋಜನೆ ಮತ್ತು ಕಾಮಗಾರಿಗಳಿಗೆ ಸರ್ಕಾರ ಹಂಚಿಕೆ ಮಾಡಿರುವ ಅನುದಾನ ಎಷ್ಟು ಮತ್ತು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; (ಸಂಪೂರ್ಣ ವಿವರ ಒದಗಿಸುವುದು)	ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ಕೈಗೊಂಡಿರುವ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಒಟ್ಟು ರೂ.769.37 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ರೂ. 743.81 ಲಕ್ಷಗಳನ್ನು ವಿವಿಧ ನಿರ್ಮಾಣ ಸಂಸ್ಥೆಗಳ ಮೂಲಕ ಬಿಡುಗಡೆ ಮಾಡಲಾಗಿರುತ್ತದೆ. ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ.
ಆ)	ಈ ಯೋಜನೆ ಮತ್ತು ಕಾಮಗಾರಿಗಳ ಅನುಷ್ಠಾನದಲ್ಲಿ ಹಣ ದುರ್ಬಳಕೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಪ್ರತ್ಯೇಕ ತನಿಖೆಗೆ ಆದೇಶ ನೀಡಲಾಗುವುದೇ; (ವಿವರ ಒದಗಿಸುವುದು)	ಇಲ್ಲ. ಮಾನ್ಯ ವಿಧಾನ ಸಭಾ ಸದಸ್ಯರ ಪ್ರಶ್ನೆಯ ಹಿನ್ನಲೆಯಲ್ಲಿ, ಸದರಿ ಕಾಮಗಾರಿಗಳ ಅನುಷ್ಠಾನದಲ್ಲಿ ಹಣ ದುರ್ಬಳಕೆ / ಕಳಪೆ ಕಾಮಗಾರಿ ಆಗಿದೆಯೇ ಎಂಬ ಕುರಿತು ಪ್ರಾಥಮಿಕ ತನಿಖೆ ಕೈಗೊಂಡು, ಹಣ ದುರ್ಬಳಕೆಯಾಗಿದ್ದಲ್ಲಿ, ನಿಯಮಾನುಸಾರ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ/ಶಿಸ್ತು ಕ್ರಮ ಜರುಗಿಸಲು ಕೋರಿ, ಜಿಲ್ಲಾಧಿಕಾರಿಗಳು, ಬೀದರ್ ಇವರಿಗೆ ಪತ್ರ ಬರೆಯಲಾಗಿರುತ್ತದೆ.
ಇ)	ಅನೇಕ ಕಾಮಗಾರಿಗಳಿಗೆ ಮಂಜೂರಾದ ಅನುದಾನ ದುರ್ಬಳಕೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಾಗಿರುವ ಕ್ರಮಗಳೇನು; (ಮಾಹಿತಿ ಒದಗಿಸುವುದು)	

ವೈಎಸ್‌ಡಿ-ಇಬಿಬಿ/76/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿ
ಹಂಚಿಕೆಯಾದ

ಕ್ರ. ಸಂ	ವರ್ಷ	ಯೋಜನೆ ವಿವರ	ಕಾ
1.	2017-18	ಕೆ.ಕೆ.ಆರ್.ಡಿ.ಬಿ. (ಮ್ಯಾಕ್ರೋ ಯೋಜನೆ ಅಡಿ)	ನೆಹರೂ ಜಿಲ್ಲಾ ಕ್ರಿ ಕಾಮಗಾರಿ.
2.	2017-18	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಹುಮ್ನಾಬಾದ್ ಕ್ರೀಡಾಂಗಣದಲ್ಲಿ ಸ್ತ್ರೀಯರ ಶೌಚಾಲ ದುರಸ್ತಿ
3.	2017-18	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಔರಾದ್ ತಾಲ್ಲೂ ಕಾಂಪೌಂಡು ಗೋ
4.	2017-18	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಬಸವಕಲ್ಯಾಣ ಕ್ರೀಡಾಂಗಣದಲ್ಲಿರ ಕ್ರೀಡಾಂಗಣ ಭಾವ
5.	2017-18	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಬಸವಕಲ್ಯಾಣ ಕ್ರೀಡಾಂಗಣದಲ್ಲಿರ ಕ್ರೀಡಾಂಗಣ, ಕ್ರೀ ಹಾಗೂ ಈಜುಕೊ ಮಾಡುವ ಕಾಮಗಾ
6.	2017-18	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಬಸವಕಲ್ಯಾಣ ಕ್ರೀಡಾಂಗಣದಲ್ಲಿರ ಕ್ರೀಡಾಂಗಣದ ಲೈ
7.	2018-19	ಕೆ.ಕೆ.ಆರ್.ಡಿ.ಬಿ	ಹುಮ್ನಾಬಾದ್ ಕ್ರೀಡಾಂಗಣದ ಕಾಮಗಾರಿ
8.	2018-19	ರಾಜ್ಯ ವಲಯ	ಬೀದರ್ ತಾಲ್ಲೂಕಿ ನಲ್ಲಿ ಗರಡಿ ಮನೆ ನಿ
9.	2018-19	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಹು ಕ್ರೀ ಮ ನಿವ
10.	2018-19	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಬೀ ಹಿಂ ಲೈ ಹೊ ಕ್ರೀ
11.	2018-19	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಔ ಕಾ ಕೊ
12.	2018-19	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಬೀ ಗ್ರಾ ಸಾ
13.	2018-19	ಜಿಲ್ಲಾ ಪಂಚಾಯತ್ ಕ್ರೀಡಾಂಗಣ ನಿರ್ವಹಣೆ	ಒ ಸಾ
14.	2019-20	ರಾಜ್ಯ ವಲಯ	ಜಿ ಪ್ರ

ವೈಎಸ್‌ಡಿ-ಇಬಿಬಿ/76/2021.

ಮ್ನಾಬಾದ ತಾಲ್ಲೂಕು ಕಾಂಗಣದಲ್ಲಿ ಪುರಷ ಮತ್ತು ಂಳಾ ಶೌಚಾಲಯ, ಗಾರ್ಡ್ ರೂಂ ರ್ಮಾಣ.	9.00	9.00	ಪಂಚಾಯತ್ ಇಂಜಿನೀಯರಿಂಗ್ ವಿಭಾಗ	ಪೂರ್ಣಗೊಂಡಿದೆ.
ನರ ಒಳಾಂಗಣ ಕ್ರೀಡಾಂಗಣ ದುಗಡೆ ರಫ್ ಪರಸಿ, ವಾಟರ್ ಪೈಪ್ ್ ಮತ್ತು ಕ್ರೀಡಾ ವಸತಿ ಶಾಲೆ ಸಕೋಣೆ, ಒಳಾಂಗಣ ತಾಂಗಣದ ಸುಣ್ಣ-ಬಣ್ಣ ಕಾಮಗಾರಿ.	5.00	5.00	ಪಂಚಾಯತ್ ಇಂಜಿನೀಯರಿಂಗ್ ವಿಭಾಗ	ಪೂರ್ಣಗೊಂಡಿದೆ.
ಾದ ತಾಲ್ಲೂಕು ಕ್ರೀಡಾಂಗಣದಲ್ಲಿ ಂಪೌಂಡು ವಾಲ್, ಬೋರ್‌ವೆಲ್ ರಸಿ, ನೀರಿನ ಪೈಪ್ ಕಾಮಗಾರಿ	5.00	5.00	ಪಂಚಾಯತ್ ಇಂಜಿನೀಯರಿಂಗ್ ವಿಭಾಗ	ಪೂರ್ಣಗೊಂಡಿದೆ.
ದರ ತಾಲ್ಲೂಕಿನ ಕಮಠಾಣಾ ಮದಲ್ಲಿ ಪ್ರಾದೇಶಿಕ ಯುವಕ ಕೇಂದ್ರ ಪಿಸಲು ಕಟ್ಟಡ ಕಾಮಗಾರಿ.	5.00	5.00	ಪಂಚಾಯತ್ ಇಂಜಿನೀಯರಿಂಗ್ ವಿಭಾಗ	ಅನುದಾನ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪ್ರಾರಂಭಿಸಲಾಗುತ್ತಿದೆ.
ಳಾಂಗಣ ಕ್ರೀಡಾಂಗಣ ಹಿಂದುಗಡೆ ಡಾ ಪರಸಿ ನೆಲಹಾಸುಗೆ	2.50	2.50	ಪಂಚಾಯತ್ ಇಂಜಿನೀಯರಿಂಗ್ ವಿಭಾಗ	ಪೂರ್ಣಗೊಂಡಿದೆ.
ಲ್ಲಾ ನೆಹರೂ ಕ್ರೀಡಾಂಗಣದಲ್ಲಿ ಕ್ಷಕರ ಗ್ಯಾಲರಿ ನಿರ್ಮಾಣ.	100.00	75.00	ಕೆ.ಆರ್.ಐ.ಡಿ.ಎಲ್	ಕಾಮಗಾರಿ ಪ್ರಗತಿಯಲ್ಲಿದೆ.
ಒಟ್ಟು	**769.37**	**743.81**		

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3342
2. ಸದಸ್ಯರ ಹೆಸರು : ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್)
3. ಉತ್ತರಿಸಬೇಕಾದ ದಿನಾಂಕ : 23-03-2021
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನಮ್ಮ ಮೆಟ್ರೋ ರೈಲು 2ನೇ ಹಂತದ ಯೋಜನೆಯಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ; (ವಿವರ ನೀಡುವುದು)	ನಮ್ಮ ಮೆಟ್ರೋ ರೈಲು 2ನೇ ಹಂತದ ಯೋಜನೆಯಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳ ಪ್ರಗತಿಯನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.
ಆ)	ಈ 2ನೇ ಹಂತದ ಯೋಜನೆಗೆ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು;	2ನೇ ಹಂತದ ಯೋಜನೆಗೆ ಫೆಬ್ರುವರಿ 2021ರ ಅಂತ್ಯದವರೆಗೆ ರೂ.16,350 ಕೋಟಿಗಳಷ್ಟು ಖರ್ಚಾಗಿರುತ್ತದೆ.
ಇ)	ಈ ಯೋಜನೆಯು ಯಾವಾಗ ಪೂರ್ಣಗೊಳ್ಳಬೇಕಾಗಿತ್ತು;	ಈ ಯೋಜನೆಯು ಮಾರ್ಚ್-2021ರ ವೇಳೆಗೆ ಪೂರ್ಣಗೊಳ್ಳಬೇಕಾಗಿತ್ತು.
ಈ)	ಈ ಯೋಜನೆಯು ಯಾವಾಗ ಪೂರ್ಣಗೊಳ್ಳುವ ಸಾಧ್ಯತೆಗಳಿವೆ;	ಈ ಯೋಜನೆಯನ್ನು ಪೂರ್ಣಗೊಳ್ಳುವ ವಿವರವನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.
ಉ)	ಈ ವಿಳಂಬಕ್ಕೆಕಾರಣಗಳೇನು?	**ಈ ವಿಳಂಬಕ್ಕೆ ಕಾರಣಗಳು ಕೆಳಕಂಡಂತಿದೆ:** 1. ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ ವಿಳಂಬವಾಗಿರುತ್ತದೆ. 2. ಮರಗಳನ್ನು ತೆರವುಗೊಳಿಸಲು ಸಾರ್ವಜನಿಕರಿಂದ ಬಂದ ಆಕ್ಷೇಪಣೆಗಳ ಹಿನ್ನಲೆಯಲ್ಲಿ ನ್ಯಾಯಾಲಯದ ಆದೇಶದ ಪ್ರಕಾರ ಮರಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯು ಸ್ಥಗಿತಗೊಂಡಿತ್ತು. 3. ಸುರಂಗ ಮಾರ್ಗದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಹೆಚ್ಚುದರಗಳನ್ನು ನಮೂದಿಸಿದ್ದುದರಿಂದ ಮರು ಟೆಂಡರ್ ಕರೆದಿದ್ದರಿಂದ ವಿಳಂಬವಾಗಿರುತ್ತದೆ. 4. ಕೋವಿಡ್-19 ಮಹಾಮಾರಿ ಸಾಂಕ್ರಾಮಿಕ ರೋಗ ಹರಡುವಿಕೆಯಿಂದಾಗಿ ಕಾಮಗಾರಿಗಳು ಸ್ಥಗಿತಗೊಂಡಿದ್ದವು.

ಕಡತ ಸಂಖ್ಯೆ: ನಅಇ 80 ಪಿ.ಆರ್.ಜೆ 2021

ಬಿ.ಎಸ್.

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿಗಳು

ಅನುಬಂಧ-1

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2ರ ಪ್ರಗತಿಯ ವಿವರಗಳು

ಪ್ರಗತಿಯ ಭೌತಿಕ ವಿವರಗಳು ಈ ಕೆಳಕಂಡಂತಿವೆ:

- **ರೀಚ್-1ರ ವಿಸ್ತರಣೆ:** ಬೈಯ್ಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್‌ವರೆಗೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಶೇ. 82%ರಷ್ಟು ಕಾಮಗಾರಿ ಮುಕ್ತಾಯಗೊಂಡಿದೆ.
- **ರೀಚ್-2ರ ವಿಸ್ತರಣೆ:** ಮೈಸೂರುರಸ್ತೆಯಿಂದ ಕೆಂಗೇರಿವರೆಗೆ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು, ಶೇ. 91%ರಷ್ಟು ಕಾಮಗಾರಿ ಮುಕ್ತಾಯಗೊಂಡಿದೆ.
- **ರೀಚ್-3 ವಿಸ್ತರಣೆ:** ನಾಗಸಂದ್ರದಿಂದ ಬಿ.ಐ.ಇ.ಸಿ.ವರೆಗೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಶೇ. 65%ರಷ್ಟು ಕಾಮಗಾರಿ ಮುಕ್ತಾಯಗೊಂಡಿದೆ.
- **ರೀಚ್-4 ವಿಸ್ತರಣೆ:** ಯಲಚೇನಹಳ್ಳಿಯಿಂದ ಅಂಜನಾಪುರ ಟೌನ್‌ಷಿಪ್‌ವರೆಗೆ ಕಾಮಗಾರಿಯು ಮುಕ್ತಾಯಗೊಂಡು ದಿನಾಂಕ: 14.01.2021ರಿಂದ ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಲಾಗಿದೆ.
- **ರೀಚ್-5 ಹೊಸ ಮಾರ್ಗ:** ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರುವರೆಗೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಶೇ. 80%ರಷ್ಟು ಕಾಮಗಾರಿ ಮುಕ್ತಾಯಗೊಂಡಿದೆ.
- **ರೀಚ್-6:** ಗೊಟ್ಟಿಗೆರೆಯಿಂದ ಡೈರಿಸರ್ಕಲ್‌ವರೆಗೆ (ಎಲಿವೇಟೆಡ್) ಕಾಮಗಾರಿಯು ಪ್ರಗತಿಯಲ್ಲಿದ್ದು, ಶೇ. 36%ರಷ್ಟು ಕಾಮಗಾರಿ ಮುಕ್ತಾಯಗೊಂಡಿದೆ.
- **ರೀಚ್-6:** ಡೈರಿ ಸರ್ಕಲ್‌ನಿಂದ ನಾಗವಾರದವರೆಗೆ (ಸುರಂಗಮಾರ್ಗ) ಕಾಮಗಾರಿಯು ಪ್ರಗತಿಯಲ್ಲಿದ್ದು, ಶೇ. 13%ರಷ್ಟು ಕಾಮಗಾರಿ ಮುಕ್ತಾಯಗೊಂಡಿದೆ.

ಅನುಬಂಧ-2

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2ರ ಮುಕ್ತಾಯಗೊಳಿಸುವ ವಿವರಗಳು:

- ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2ರಲ್ಲಿ 72.10 ಕಿ.ಮೀ.ಗಳ ಉದ್ದವಿದ್ದು, ದಕ್ಷಿಣ ವಿಸ್ತರಣೆ: ಯಲಚೇನಹಳ್ಳಿಯಿಂದ ಸಿಲ್ಕ್ ಸಂಸ್ಥೆಯವರೆಗೆ 6.3 ಕಿ.ಮೀ.ಗಳ ಉದ್ದದ ಮೆಟ್ರೋ ಮಾರ್ಗವನ್ನು ದಿನಾಂಕ: 14.01.2021ರಂದು ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಲಾಯಿತು.
- ಪಶ್ಚಿಮ ವಿಸ್ತರಣೆ: ಮೈಸೂರು ರಸ್ತೆಯಿಂದ ಕೆಂಗೇರಿಯವರೆಗೆ 7.5 ಕಿ.ಮೀ.ಗಳ ಉದ್ದದ ಮಾರ್ಗವನ್ನು ಜೂನ್-2021ರ ವೇಳೆಗೆ ಪೂರ್ಣಗೊಳಸಲು ಯೋಜಿಸಲಾಗಿದೆ.
- ಪೂರ್ವ ವಿಸ್ತರಣೆ, ಉತ್ತರ ವಿಸ್ತರಣೆ ಹಾಗೂ ಹೊಸ ಮಾರ್ಗಗಳನ್ನು ಒಳಗೊಂಡ 51 ಕಿ.ಮೀ.ಗಳ ಉದ್ದದ ಮಾರ್ಗವನ್ನು ಡಿಸೆಂಬರ್-2022ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.
- ರೀಚ್-6 ಎತ್ತರಿಸಿದ ಮಾರ್ಗ: ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗೆ 7.5 ಕಿ.ಮೀ.ಗಳ ಉದ್ದದ ಮಾರ್ಗವನ್ನು ಡಿಸೆಂಬರ್-2023ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.
- ರೀಚ್-6 ಸುರಂಗಮಾರ್ಗ: ತಾವರೆಕೆರೆಯಿಂದ ನಾಗವಾರದವರೆಗೆ 13.8 ಕಿ.ಮೀ.ಗಳ ಉದ್ದದ ಮಾರ್ಗವನ್ನು ಮಾರ್ಚ್-2025ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

37a

ಕರ್ನಾಟಕ ವಿಧಾನಸಭೆ

	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3355
	ಸದಸ್ಯರ ಹೆಸರು	:	ಶ್ರೀ ರಾಜೇಗೌಡ ಟಿ.ಡಿ
	ವಿಷಯ	:	ಗ್ರಾಮ-1 ಕೇಂದ್ರಗಳ ಸ್ಥಾಪನೆ ಕುರಿತು
	ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು
	ಉತ್ತರಿಸುವ ದಿನಾಂಕ	:	22-03-2021

<table>
ಅ) ಕೆ.ಎಸ್.ಎಫ್.ಸಿ ಯಿಂದ ಯಾವ ಯಾವ ಉದ್ಯಮಕ್ಕೆ ಉತ್ತೇಜನ ನೀಡಲು ಸಾಲ ನೀಡಲಾಗುವುದು; ಮಹಿಳೆಯರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಸಾಲ ಪಡೆಯಲು ಇರುವ ಮಾನದಂಡಗಳೇನು; ಯಾವ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತದೆ;	ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆಎಸ್ಎಫ್‌ಸಿ) ಯಿಂದ ಕರ್ನಾಟಕ ರಾಜ್ಯದಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಹಾಗೂ ಸೇವಾ ಘಟಕಗಳಿಗೆ ದೀರ್ಘಾವಧಿ ಸಾಲ ಸೌಲಭ್ಯ ನೀಡಲಾಗುತ್ತದೆ. **1. ಪರಿಶಿಷ್ಟ ಜಾತಿ / ಪಂಗಡದ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:** ಪರಿಶಿಷ್ಟ ಜಾತಿ / ಪಂಗಡದ ಉದ್ದಿಮೆದಾರರು ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಘಟಕಗಳಿಗೆ ಮತ್ತು ಸೇವಾ ಕ್ಷೇತ್ರದ ಉದ್ದಿಮೆಗಳ ಸ್ಥಾಪನೆಗೆ ಹಾಗೂ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಶೇ.4ರ ವಾರ್ಷಿಕ ಬಡ್ಡಿ ದರದಲ್ಲಿ ಅವಧಿಸಾಲವನ್ನು ನೀಡಲಾಗುತ್ತಿದೆ. ಕೆ.ಎಸ್.ಎಫ್.ಸಿ. ವಿಧಿಸುವ ಸಾಮಾನ್ಯ ಬಡ್ಡಿ ದರದ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಮರುಪಾವತಿಸಲಾಗುತ್ತದೆ. ಈ ಯೋಜನೆಯಡಿ ಕನಿಷ್ಠ 10.00 ಲಕ್ಷ ರೂ.ಗಳಿಂದ ಗರಿಷ್ಠ 10.00 ಕೋಟಿ ರೂ.ಗಳವರೆಗೆ ಸಾಲದ ನೆರವು ದೊರೆಯುತ್ತದೆ. ಅವಧಿ ಸಾಲದ ಮರುಪಾವತಿಯ ಅವಧಿಯು ಗರಿಷ್ಠ 8 ವರ್ಷ. ಪರಿಶಿಷ್ಟ ಜಾತಿ / ಪಂಗಡದ ಉದ್ಯಮಿಗಳಿಗಾಗಿ ಅತಿ ಸಣ್ಣ ಮತ್ತು ಸಣ್ಣ ಪ್ರಮಾಣದ ಯೋಜನಾ ವೆಚ್ಚ ರೂ.2.00 ಕೋಟಿ ಮೀರದ ಕೈಗಾರಿಕೆಗಳನ್ನು ಹೊಸದಾಗಿ ಸ್ಥಾಪಿಸುವವರಿಗೆ ಪೂರಕ ಭದ್ರತೆ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಯೋಜನೆಯ ಮಾನದಂಡಗಳು : – ಘಟಕದ ಸಂಪೂರ್ಣ ಮಾಲೀಕತ್ವವನ್ನು ಪರಿಶಿಷ್ಟ ಜಾತಿ / ಪಂಗಡದ ಉದ್ದಿಮೆದಾರರೇ ಹೊಂದಿರಬೇಕು. ಇವರನ್ನು ಹೊರತುಪಡಿಸಿ ಬೇರೆ ಉದ್ದಿಮೆದಾರರು ಈ ಯೋಜನೆಯಡಿಯಲ್ಲಿ ಬಡ್ಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ. ಎಲ್ಲಾ ಪಾಲುದಾರರು/ ಉದ್ದಿಮೆದಾರರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. – ಈ ಯೋಜನೆಯಡಿಯಲ್ಲಿ ಈಗಾಗಲೇ ರಾಜ್ಯ ಸರ್ಕಾರ / ಕೇಂದ್ರ ಸರ್ಕಾರದಿಂದ ಘಟಕ ಪ್ರಾರಂಭಿಸಲು ಬಡ್ಡಿ ಸಹಾಯಧನ ಪಡೆದಿದ್ದಲ್ಲಿ ಅಂತಹವರಿಗೆ ಈ ಯೋಜನೆಯಡಿಯಲ್ಲಿ ಅವಕಾಶವಿರುವುದಿಲ್ಲ. – ಈ ಯೋಜನೆಯಡಿಯಲ್ಲಿ ಬಡ್ಡಿ ಸಹಾಯಧನ ಪಡೆಯಲು, ಉದ್ದಿಮೆದಾರರು ಸಾಲದ ಮರುಪಾವತಿಯಲ್ಲಿ ಸುಸ್ತಿದಾರರಾಗಿರಬಾರದು.

ಪ್ರಶ್ನೆ	ಉತ್ತರ
	2. ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ: ಈ ಯೋಜನೆಯಡಿ ತಯಾರಿಕಾ ಕ್ಷೇತ್ರ ಹಾಗೂ ಸೇವಾ ಕ್ಷೇತ್ರದಲ್ಲಿ ಸಣ್ಣ ಹಾಗೂ ಮಧ್ಯಮ ವರ್ಗದ ಕೈಗಾರಿಕೆ ಘಟಕಗಳನ್ನು ಸ್ಥಾಪಿಸುವ ಮಹಿಳಾ ಉದ್ದಿಮೆದಾರರಿಗೆ 200.00 ಲಕ್ಷ ರೂ.ಗಳವರೆಗೆ ಶೇ.4 ರಷ್ಟು ಬಡ್ಡಿ ದರದಲ್ಲಿ ಸಾಲದ ಸೌಲಭ್ಯ ನೀಡಲಾಗುವುದು. ರೂ.200.00 ಲಕ್ಷ ಮೀರಿದ ಸಾಲವನ್ನು ಸಾಮಾನ್ಯ ಬಡ್ಡಿ ದರದಲ್ಲಿ ನೀಡಲಾಗುವುದು. ಕೆ.ಎಸ್.ಎಫ್.ಸಿ. ವಿಧಿಸುವ ಸಾಮಾನ್ಯ ಬಡ್ಡಿ ದರದ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮರುಪಾವತಿಸಲಾಗುತ್ತದೆ. ಅವಧಿ ಸಾಲದ ಮರುಪಾವತಿಯ ಅವಧಿಯು 8 ವರ್ಷ. ಆದರೆ, ಬಡ್ಡಿ ಸಹಾಯಧನದ ಅವಧಿಯು 5 ವರ್ಷಗಳಾಗಿದ್ದು, ನಂತರ ಉಳಿದಿರುವ ಸಾಲದ ಮೊತ್ತಕ್ಕೆ ಸಾಮಾನ್ಯ ಬಡ್ಡಿ ದರ ವಿಧಿಸಲಾಗುವುದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದಿಂದ ದೊರಕುವ ಸಬ್ಸಿಡಿ ಮೊತ್ತದಲ್ಲಿ ಕೊರತೆಯಾದ ಕಾರಣ ಈ ಯೋಜನೆಯಡಿ ಡಿಸೆಂಬರ್ 2019ರಿಂದ ಹೊಸದಾಗಿ ಸಾಲ ಮಂಜೂರು ಮಾಡುವುದನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ. ಯೋಜನೆಯ ಮಾನದಂಡಗಳು : – ಘಟಕದ ಮಾಲೀಕರು ಮಹಿಳಾ ಉದ್ದಿಮೆದಾರರಾಗಿರಬೇಕು. ಪಾಲುದಾರಿಕೆಯ ಉದ್ಯಮ / ನಿಯಮಿತ ಕಂಪನಿಗಳಲ್ಲಿ ಹೆಚ್ಚಿನ ಷೇರು / ನಿರ್ದೇಶಕರು ಶೇ.51ರಷ್ಟು ಇರಬೇಕು. – ಈ ಯೋಜನೆಯಡಿಯಲ್ಲಿ ಈಗಾಗಲೇ ರಾಜ್ಯ ಸರ್ಕಾರ / ಕೇಂದ್ರ ಸರ್ಕಾರದಿಂದ ಘಟಕ ಪ್ರಾರಂಭಿಸಲು ಬಡ್ಡಿ ಸಹಾಯಧನ ಪಡೆದಿದ್ದಲ್ಲಿ ಅಂತಹವರಿಗೆ ಈ ಯೋಜನೆಯಡಿಯಲ್ಲಿ ಅವಕಾಶವಿರುವುದಿಲ್ಲ. – ಈ ಯೋಜನೆಯಡಿಯಲ್ಲಿ ಬಡ್ಡಿ ಸಹಾಯಧನ ಪಡೆಯಲು, ಉದ್ದಿಮೆದಾರರು ಸಾಲದ ಮರುಪಾವತಿಯಲ್ಲಿ ಸುಸ್ತಿದಾರರಾಗಿರಬಾರದು
ಆ) ಹಾಗಿದ್ದಲ್ಲಿ ಕೆ.ಎಸ್.ಎಫ್.ಸಿ ಮೂಲಕ ಹೋಟೆಲ್ ಉದ್ಯಮಕ್ಕೆ ಸಾಲ ನೀಡಲು ಇರುವ ಮಾನದಂಡಗಳೇನು; ಸಾಲ ಮರುಪಾವತಿ ಮಾಡಲು ಎಷ್ಟು ವರ್ಷ ನಿಗಧಿಪಡಿಸಲಾಗುತ್ತದೆ; (ವಿವರ ನೀಡುವುದು)	ಹೋಟೆಲ್ ಉದ್ಯಮ ಸ್ಥಾಪಿಸಲು ಪರಿಶಿಷ್ಟ ಜಾತಿ / ಪಂಗಡದವರಿಗೆ ಮೇಲೆ ತಿಳಿಸಿರುವಂತೆ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ನೀಡಲಾಗುವುದು. ಇತರರಿಗೆ ಸಾಮಾನ್ಯ ಯೋಜನೆಯಡಿ ಸಾಲ ನೀಡಲಾಗುವುದು ಮತ್ತು ಸಾಲವನ್ನು ಮರುಪಾವತಿ ಮಾಡಲು 8 ವರ್ಷ ನಿಗಧಿಪಡಿಸಲಾಗಿದೆ.

17

ಪ್ರಶ್ನೆ	ಉತ್ತರ
ಇ) ಹೋಟೆಲ್ ಉದ್ಯಮದಲ್ಲಿ ತೊಡಗಲು ಮಹಿಳೆಯರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕೆ.ಎಸ್.ಎಫ್.ಸಿ ಮೂಲಕ ಯಾವ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತದೆ; 50 ವರ್ಷ ಮೇಲ್ಪಟ್ಟ ಮಹಿಳೆಯರು ಸಾಲ ಪಡೆಯಲು ಇರುವ ಮಾನದಂಡಗಳೇನು; ಹಾಗಿದ್ದಲ್ಲಿ, ಬೇರೆಯವರನ್ನು ಪಾಲುದಾರರನ್ನಾಗಿ ಮಾಡಿಕೊಂಡು ಸಾಲ ಪಡೆಯಲು ಇರುವ ಮಾನದಂಡಗಳೇನು;	ಮಹಿಳಾ ಉದ್ಯಮದಾರರಿಗೆ ಹೋಟೆಲ್ ಉದ್ಯಮ ಸ್ಥಾಪಿಸಲು ಮೇಲೆ ತಿಳಿಸಿರುವ ಮಹಿಳಾ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಸಾಲ ನೀಡಲಾಗುವುದು. ಮಧ್ಯಮ, ಸಣ್ಣ ಹಾಗೂ ಅತಿಸಣ್ಣ ಉದ್ದಿಮೆದಾರರಿಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಶೇ.6ರ ರಿಯಾಯಿತಿ ದರದಲ್ಲಿ ಸಾಲಗಳನ್ನು ನೀಡುವ ಯೋಜನೆಯನ್ನು ಜಾರಿಗೆ ತಂದಿದ್ದರಿಂದ ಮತ್ತು ಈ ಯೋಜನೆಯಲ್ಲಿ ಮಹಿಳಾ ಉದ್ದಿಮೆದಾರರು ಒಳಗೊಂಡಿರುವುದರಿಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ಬಡ್ಡಿ ಸಹಾಯಧನ ಯೋಜನೆಯನ್ನು 2019ರಿಂದ ಸ್ಥಗಿತಗೊಳಿಸಲಾಗಿದೆ.
ಈ) ಹೋಟೆಲ್ ಉದ್ಯಮದ ಒಟ್ಟಾರೆ ಮೊತ್ತದ ಶೇಕಡ ಎಷ್ಟು ಸಾಲ ನೀಡಲಾಗುವುದು?	ಸಂಸ್ಥೆಯಿಂದ ಹೋಟೆಲ್ ಉದ್ಯಮಕ್ಕೆ ನೀಡಲಾಗುವ ಗರಿಷ್ಠ ಸಾಲದ ಮೊತ್ತ ಶೇ.70 ರಿಂದ ಶೇ.75. ಉದ್ದಿಮೆದಾರರ ಬಂಡವಾಳ, ಸಾಲ ಈಕ್ವಿಟಿ ಅನುಪಾತ (Debt Equity Ratio) 2:1 ಇರತಕ್ಕದ್ದು.

ಆಇ 08 ಬಿಎಫ್ ಸಿ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3461

2 ಸದಸ್ಯರ ಹೆಸರು : ಶ್ರೀ ರಾಘವೇಂದ್ರ ಬಸವರಾಜ್ ಹಿಟ್ನಾಳ್ ಕೆ. (ಕೊಪ್ಪಳ)

3 ಉತ್ತರಿಸುವ ದಿನಾಂಕ : 23/03/2021

4 ಉತ್ತರಿಸುವ ಸಚಿವರು : ಗೃಹ ಸಚಿವರು

ಪ್ರ ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕದಲ್ಲಿ ಎಷ್ಟು ಕೆ.ಎಸ್.ಆರ್.ಪಿ. ಮತ್ತು ಐ.ಆರ್.ಬಿ. ಬೆಟಾಲಿಯನ್‌ಗಳಿವೆ (ವಿವರ ನೀಡುವುದು)	ಕರ್ನಾಟಕದಲ್ಲಿ ಒಟ್ಟು 12 ಕೆ.ಎಸ್.ಆರ್.ಪಿ. ಬೆಟಾಲಿಯನ್‌ಗಳು ಹಾಗು 02 ಐ.ಆರ್.ಬಿ., ಬೆಟಾಲಿಯನ್‌ಗಳು ಮತ್ತು 02 ಕೆ.ಎಸ್.ಆರ್.ಪಿ. ತರಬೇತಿ ಶಾಲೆಗಳಿರುತ್ತವೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಆ)	ಹೈದರಾಬಾದ್ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕೇತರ (HK & Non HK) ಬೆಟಾಲಿಯನ್‌ಗಳಲ್ಲಿ ಮುಂಬಡ್ತಿಯಲ್ಲಿ ಶೇಕಡಾವಾರು ಎಷ್ಟು ಮೀಸಲಾತಿ ನೀಡಲಾಗುತ್ತಿದೆ (ವಿವರ ನೀಡುವುದು)	ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 06 ಪಿಎಸ್‌ಎಕ್ಸ್ 2012, ದಿನಾಂಕ:06.11.2013ರ ನಿಯಮಗಳ ಅಧ್ಯಾಯ-1ರಲ್ಲಿ ನಿಗಧಿಪಡಿಸಿರುವಂತೆ ಕೆ.ಎಸ್.ಆರ್.ಪಿ/ಐ.ಆರ್.ಬಿ. ಪಡೆಗಳು ಹಾಗೂ ಕೆ.ಎಸ್.ಆರ್.ಪಿ. ತರಬೇತಿ ಶಾಲೆಗಳಲ್ಲಿ ಈ ಕೆಳಕಂಡಂತೆ ಮುಂಬಡ್ತಿಯಲ್ಲಿ ಶೇಕಡಾವಾರು ಮೀಸಲಾತಿಯನ್ನು ನಿಗಧಿಪಡಿಸಲಾಗಿರುತ್ತದೆ. **ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ** 'ಬಿ' ವೃಂದದ ಹುದ್ದೆಗೆ ಶೇಕಡಾ 75% 'ಸಿ' ವೃಂದದ ಹುದ್ದೆಗೆ ಶೇಕಡಾ 80% 'ಡಿ' ವೃಂದದ ಹುದ್ದೆಗೆ ಶೇಕಡಾ 85% ರಷ್ಟು ಸ್ಥಳೀಯ ಮೀಸಲಾತಿ ನಿಗಧಿಪಡಿಸಲಾಗಿದೆ. **ಹೈದರಾಬಾದ್-ಕರ್ನಾಟಕೇತರ ಪ್ರದೇಶದಲ್ಲಿ** ಬಿ, ಸಿ ಮತ್ತು ಡಿ ವೃಂದದ ಹುದ್ದೆಗಳಲ್ಲಿ ಶೇಕಡಾ 8% ರಷ್ಟು ಮೀಸಲಾತಿ ನಿಗಧಿಪಡಿಸಲಾಗಿದೆ. ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಲಾಗಿದೆ.
ಇ)	ಹೈದರಾಬಾದ್-ಕರ್ನಾಟಕ ವ್ಯಾಪ್ತಿಯ ಬೆಟಾಲಿಯನ್‌ಗಳಲ್ಲಿ ಹೈದರಾಬಾದ್ ಕರ್ನಾಟಕದವರಿಗಿಂತ ಹೈದರಾಬಾದ್ ಕರ್ನಾಟಕೇತರ ಸಿಬ್ಬಂದಿಗಳು ಶೇಕಡಾವಾರುಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಹೈದರಾಬಾದ್ ಕರ್ನಾಟಕದವರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 43 ಹೆಚ್‌ಕೆಸಿ 2013, ದಿನಾಂಕ:29.01.2014ರ ನಿಯಮಗಳ ಅಧ್ಯಾಯ-6 ರಲ್ಲಿ ಸೂಚಿಸಿರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ)	ಹೈದರಾಬಾದ್-ಕರ್ನಾಟಕ ಮೀಸಲಾತಿಯನ್ನು ಕರ್ನಾಟಕದ ಎಲ್ಲಾ ಬೆಟಾಲಿನ್‌ಗಳಲ್ಲಿ ವಿಸ್ತರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದುವರೆಗೂ ವಿಸ್ತರಣೆ ಮಾಡದಿರಲು ಕಾರಣಗಳೇನು? (ವಿವರ ನೀಡುವುದು)	ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 55 ರಾಕಾವ್ಯ 2013, ದಿನಾಂಕ:05.08.2015 ರಲ್ಲಿ ನೀಡಲಾದ ಸ್ಪಷ್ಟೀಕರಣದ ಅನ್ವಯ ಹೈದರಾಬಾದ್-ಕರ್ನಾಟಕ ಮೀಸಲಾತಿಯನ್ನು ಹೈದರಾಬಾದ್-ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಲ್ಲಿರುವ ಪಡೆಗಳಿಗೆ ಹಾಗೂ ಕೇಂದ್ರಸ್ಥಾನದ ಪಡೆಗಳಿಗೆ (ಬೆಂಗಳೂರು) ಮೀಸಲಾತಿಯನ್ನು ಜಾರಿಗೊಳಿಸಲಾಗಿರುತ್ತದೆ.

ಸಂಖ್ಯೆ: ಒಇ 70 ಪಿಇಜಿ 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಅನುಬಂಧ-1

(ಕೆಎಸ್‌ಆರ್‌ಪಿ/ಐಆರ್‌ಬಿ/ಕೆಎಸ್‌ಆರ್‌ಪಿ ತರಬೇತಿ ಶಾಲೆಗಳ ವಿವರಗಳು)

ಕ್ರ ಸಂ	ಪಡೆ
1	1ನೇ ಪಡೆ ಕೆಎಸ್‌ಆರ್‌ಪಿ, ಬೆಂಗಳೂರು
2	2ನೇ ಪಡೆ ಕೆಎಸ್‌ಆರ್‌ಪಿ, ಬೆಳಗಾವಿ
3	3ನೇ ಪಡೆ ಕೆಎಸ್‌ಆರ್‌ಪಿ, ಬೆಂಗಳೂರು
4	4ನೇ ಪಡೆ ಕೆಎಸ್‌ಆರ್‌ಪಿ, ಬೆಂಗಳೂರು
5	5ನೇ ಪಡೆ ಕೆಎಸ್‌ಆರ್‌ಪಿ, ಮೈಸೂರು
6	6ನೇ ಪಡೆ ಕೆಎಸ್‌ಆರ್‌ಪಿ, ಕಲಬುರಗಿ
7	7ನೇ ಪಡೆ ಕೆಎಸ್‌ಆರ್‌ಪಿ, ಮಂಗಳೂರು
8	8ನೇ ಪಡೆ ಕೆಎಸ್‌ಆರ್‌ಪಿ, ಶಿವಮೊಗ್ಗ
9	9ನೇ ಪಡೆ ಕೆಎಸ್‌ಆರ್‌ಪಿ, ಬೆಂಗಳೂರು
10	10ನೇ ಪಡೆ ಕೆಎಸ್‌ಆರ್‌ಪಿ, ಶಿಗ್ಗಾವಿ
11	11ನೇ ಪಡೆ ಕೆಎಸ್‌ಆರ್‌ಪಿ, ಹಾಸನ
12	12ನೇ ಪಡೆ ಕೆಎಸ್‌ಆರ್‌ಪಿ, ತುಮಕೂರು
13	ಐಆರ್‌ಬಿ, ಮುನಿರಾಬಾದ್, ಕೊಪ್ಪಳ ಜಿಲ್ಲೆ.
14	ಐಆರ್‌ಬಿ, ವಿಜಯಪುರ
15	ಕೆಎಸ್‌ಆರ್‌ಪಿ ತರಬೇತಿ ಶಾಲೆ, ಮುನಿರಾಬಾದ್, ಕೊಪ್ಪಳ ಜಿಲ್ಲೆ.
16	ಕೆಎಸ್‌ಆರ್‌ಪಿ ತರಬೇತಿ ಶಾಲೆ, ಕಂಗ್ರಾಳಿ, ಬೆಳಗಾವಿ

ಅನುಬಂಧ–2

(ಕೆಎಸ್‌ಆರ್‌ಪಿ/ಐಆರ್‌ಬಿ/ಕೆಎಸ್‌ಆರ್‌ಪಿ ತರಬೇತಿ ಶಾಲೆಗಳ ವಿವರಗಳು)

ಕ್ರ ಸಂ	ಪಡೆ	ಮೀಸಲಾತಿಯ ವಿವರ
ಹೈದರಾಬಾದ್–ಕರ್ನಾಟಕೇತರ ಪ್ರದೇಶ		
1	1ನೇ ಪಡೆ ಕೆಎಸ್‌ಆರ್‌ಪಿ, ಬೆಂಗಳೂರು	ಬಿ, ಸಿ ಮತ್ತು ಡಿ ವೃಂದದ ಹುದ್ದೆಗಳಿಗೆ ಶೇಕಡಾ 08% ರಷ್ಟು ಮೀಸಲಾತಿ ನಿಗಧಿಪಡಿಸಲಾಗಿದೆ.
2	3ನೇ ಪಡೆ ಕೆಎಸ್‌ಆರ್‌ಪಿ, ಬೆಂಗಳೂರು	
3	4ನೇ ಪಡೆ ಕೆಎಸ್‌ಆರ್‌ಪಿ, ಬೆಂಗಳೂರು	
4	9ನೇ ಪಡೆ ಕೆಎಸ್‌ಆರ್‌ಪಿ, ಬೆಂಗಳೂರು	
5	ಕೆಎಸ್‌ಆರ್‌ಪಿ ತರಬೇತಿ ಶಾಲೆ, ಕಂಗ್ರಾಳಿ, ಬೆಳಗಾವಿ	
ಹೈದರಾಬಾದ್–ಕರ್ನಾಟಕ ಪ್ರದೇಶ		
1	6ನೇ ಪಡೆ ಕೆಎಸ್‌ಆರ್‌ಪಿ, ಕಲಬುರಗಿ	'ಬಿ' ವೃಂದದ ಹುದ್ದೆಗೆ ಶೇಕಡಾ 75% 'ಸಿ' ವೃಂದದ ಹುದ್ದೆಗೆ ಶೇಕಡಾ 80% 'ಡಿ' ವೃಂದದ ಹುದ್ದೆಗೆ ಶೇಕಡಾ 85% ರಷ್ಟು ಸ್ಥಳೀಯ ಮೀಸಲಾತಿ ನಿಗಧಿಪಡಿಸಲಾಗಿದೆ.
2	ಐಆರ್‌ಬಿ, ಮುನಿರಾಬಾದ್, ಕೊಪ್ಪಳ ಜಿಲ್ಲೆ.	
3	ಕೆಎಸ್‌ಆರ್‌ಪಿ ತರಬೇತಿ ಶಾಲೆ, ಮುನಿರಾಬಾದ್, ಕೊಪ್ಪಳ ಜಿಲ್ಲೆ.	

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3472
ಸದಸ್ಯರ ಹೆಸರು	:	ಶ್ರೀ ಲಿಂಗೇಶ ಕೆ.ಎಸ್. (ಬೇಲೂರು)
ಉತ್ತರಿಸಬೇಕಾದ ದಿನಾಂಕ	:	23.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಬೆಸ್ಕಾಂ ವ್ಯಾಪ್ತಿಗೆ ಒಳಪಡುವ ಬೆಂಗಳೂರಿನ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡಲು ಸ್ಥಾಪಿಸಲಾಗಿರುವ ವಿತರಣಾ ಪರಿವರ್ತಕಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಬೆಂಗಳೂರು ನಗರ ಜಿಲ್ಲೆಯಲ್ಲಿ ಫೆಬ್ರವರಿ–2021 ರ ಅಂತ್ಯಕ್ಕೆ ಒಟ್ಟು 66,666 ಸಂಖ್ಯೆಯ ವಿವಿಧ ಸಾಮರ್ಥ್ಯದ ಪರಿವರ್ತಕಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.
ಆ)	ಬೆಂಗಳೂರಿನಲ್ಲಿ ಅಳವಡಿಸಲಾಗಿರುವ ಈ ವಿದ್ಯುತ್ ವಿತರಣಾ ಪರಿವರ್ತಕಗಳಿಗೆ ಆಗಿರುವ ವೆಚ್ಚವೆಷ್ಟು; ಇವುಗಳಲ್ಲಿ ಪಾದಚಾರಿ ರಸ್ತೆಗಳ ಮೇಲೆ ಅಳವಡಿಸಿರುವ ಪರಿವರ್ತಕಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಬೆಂಗಳೂರು ನಗರ ಜಿಲ್ಲೆಯಲ್ಲಿ ಹಾಲಿ ಇರುವ ಪರಿವರ್ತಕಗಳಲ್ಲಿ, ಕಳೆದ ಮೂರು ವರ್ಷಗಳಲ್ಲಿ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ ಹಾಗೂ ಅದರ ವೆಚ್ಚದ ವಿವರಗಳನ್ನು **ಅನುಬಂಧ–2** ರಲ್ಲಿ ಒದಗಿಸಲಾಗಿದೆ ಹಾಗೂ ಕಳೆದ ಮೂರು ವರ್ಷಗಳಲ್ಲಿ ಪಾದಚಾರಿ ರಸ್ತೆಗಳಲ್ಲಿ ಯಾವುದೇ ಪರಿವರ್ತಕಗಳನ್ನು ಅಳವಡಿಸಿರುವುದಿಲ್ಲ.
ಇ)	ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಪಾದಚಾರಿ ರಸ್ತೆಗಳ ಮೇಲೆ ಇರುವ ಪರಿವರ್ತಕಗಳನ್ನು ಬೇರೆಡೆಗೆ ಸ್ಥಳಾಂತರಿಸಿರುವ ಪರಿವರ್ತಕಗಳ ಸಂಖ್ಯೆ ಎಷ್ಟು; ಈ ಕಾಮಗಾರಿಗೆ ಆಗಿರುವ ವೆಚ್ಚವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	ಬೆಂಗಳೂರು ನಗರದ ಪಾದಚಾರಿ ರಸ್ತೆಗಳ ಮೇಲೆ ಇರುವ ಪರಿವರ್ತಕಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಮಾನ್ಯ ಉಚ್ಚ ನ್ಯಾಯಾಲಯ ಆದೇಶ ನೀಡಿರುವುದಿಲ್ಲ. ಆದರೆ, ಮಾನ್ಯ ಉಚ್ಚ ನ್ಯಾಯಾಲಯದಿಂದ ಬೆ.ವಿ.ಕಂಪನಿಗೆ ದಿನಾಂಕ:17.09.2014 ರಂದು ಪಾದಚಾರಿ ಮಾರ್ಗಗಳಲ್ಲಿರುವ ವಿದ್ಯುತ್ ಪರಿವರ್ತಕಗಳಿಂದ ಅಪಾಯಗಳನ್ನು ತಪ್ಪಿಸಲು ಸುರಕ್ಷತಾ ಕ್ರಮಗಳನ್ನು ಪಾಲಿಸಲು ಮತ್ತು ಕೈಗೊಳ್ಳಲಿರುವ ಕ್ರಮಗಳ ಬಗ್ಗೆ ಸ್ಪಷ್ಟ ಕಾರ್ಯ ಸೂಚಿಯನ್ನು ನ್ಯಾಯಾಲಯದ ಮುಂದೆ ಮಂಡಿಸಲು ಆದೇಶ ನೀಡಲಾಗಿತ್ತು. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಒಟ್ಟು 4358 ಸಂಖ್ಯೆಯ ಪಾದಚಾರಿ ಮಾರ್ಗಗಳಲ್ಲಿರುವ ಪರಿವರ್ತಕಗಳು ಪಾದಚಾರಿಗಳಿಗೆ ಅಡಚಣೆಯಾಗುತ್ತಿದ್ದು, ಅವುಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸುವ/ಸ್ಥಳಾಂತರಿಸುವ ಅವಶ್ಯಕತೆ ಇರುತ್ತದೆ.

		ಆದರಂತೆ ಒಟ್ಟು 3194 ಸಂಖ್ಯೆಯ ಪಾದಚಾರಿ ಮಾರ್ಗದಲ್ಲಿರುವ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಪರಿವರ್ತಿಸಿ ಹಾಗೂ 2 ಸಂಖ್ಯೆಯ ಪರಿವರ್ತಕಗಳನ್ನು ಸಿ.ಎ. ಸೈಟಿಗೆ ಸ್ಥಳಾಂತರಿಸಿ ಪಾದಚಾರಿಗಳಿಗೆ ಸಂಚರಿಸಲು ಅನುಕೂಲವಾಗುವಂತೆ ಮಾಡಲಾಗಿದೆ. ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಗುಲಿರುವ ಒಟ್ಟು ವೆಚ್ಚ: ರೂ.161.44 ಕೋಟಿಗಳು. ಉಳಿದ ಪಾದಚಾರಿ ಮಾರ್ಗದಲ್ಲಿರುವ ಪರಿವರ್ತಕ ಕೇಂದ್ರಗಳನ್ನು ಸ್ಪನ್ ಪೋಲ್ ಗಳ ಮೇಲೆ ಅಳವಡಿಸುವ ಕಾಮಗಾರಿಯನ್ನು ಹೆಚ್.ಟಿ/ಎಲ್.ಟಿ ಮೇಲ್ಮಾರ್ಗಗಳನ್ನು ಭೂಗತ ಕೇಬಲ್/ಏರಿಯಲ್ ಬಂಚ್ ಕೇಬಲ್ ಮಾರ್ಗಗಳನ್ನಾಗಿ ಪರಿವರ್ತಿಸುವ ಯೋಜನೆ (Over Head to UG) ಯಡಿಯಲ್ಲಿ ಕೈಗೊಂಡಿದ್ದು, ಫೆಬ್ರವರಿ–2021ರ ಅಂತ್ಯಕ್ಕೆ ಒಟ್ಟು 622 ಪರಿವರ್ತಕಗಳನ್ನು ಸ್ಪನ್ ಪೋಲ್ ಗಳ ಮೇಲೆ ಅಳವಡಿಸಲಾಗಿದ್ದು, ಕಾಮಗಾರಿ ವೆಚ್ಚ: ರೂ.9.02 ಕೋಟಿಗಳಾಗಿರುತ್ತವೆ. ಮುಂದುವರೆದು, ಬಾಕಿ ಇರುವ 540 ಸಂಖ್ಯೆಯ ಟ್ರಾನ್ಸ್ ಫಾರ್ಮರ್‌ಗಳನ್ನು ಬೆ.ವಿ.ಕಂಪನಿಯಲ್ಲಿ ಹಾಲಿ ಚಾಲ್ತಿಯಲ್ಲಿರುವ ಸದರಿ ಯೋಜನೆಗಳ ಅಡಿಯಲ್ಲಿ ಹಾಗೂ ಇತರೆ ಕಾಮಗಾರಿಯಡಿಯಲ್ಲಿ ಕೈಗೆತ್ತಿಕೊಂಡು ಹಂತ ಹಂತವಾಗಿ ಬದಲಾಯಿಸಿ ಪಾದಚಾರಿಗಳಿಗೆ ಅಡಚಣೆಯಾಗದಂತೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಎನರ್ಜಿ 126 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಪ್ರಶ್ನೆ ಸಂಖ್ಯೆ 3472ಕ್ಕೆ ಅನುಬಂಧ–1

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ 2020–21 (ಫೆಬ್ರವರಿ–2021 ರ ಅಂತ್ಯಕ್ಕೆ) ಹಾಲಿ ಇರುವ ಪರಿವರ್ತಕಗಳ ಸಂಖ್ಯೆ

ಕ್ರಸಂ	ತಾಲ್ಲೂಕು	ಫೆಬ್ರವರಿ –2021 ರ ಅಂತ್ಯಕ್ಕೆ ಹಾಲಿ ಇರುವ ಪರಿವರ್ತಕಗಳ ವಿವರ							
		15 ಕೆವಿಎ	25 ಕೆವಿಎ	63 ಕೆವಿಎ	100 ಕೆವಿಎ	250 ಕೆವಿಎ	500 ಕೆವಿಎ	500 ಕೆವಿಎ ಕ್ಕಿಂತ ಹೆಚ್ಚಿನ ಸಾಮರ್ಥ್ಯ	ಒಟ್ಟು
1	ಬೆಂಗಳೂರು ದಕ್ಷಿಣ	678	917	5075	9649	12331	2727	235	31612
2	ಬೆಂಗಳೂರು ಉತ್ತರ	84	495	1464	4240	4361	917	57	11618
3	ಬೆಂಗಳೂರು ಪೂರ್ವ	1	61	1836	3841	4867	1701	182	12489
4	ಆನೇಕಲ್	0	3425	2140	4158	1007	217	0	10947
	ಒಟ್ಟು	**763**	**4898**	**10515**	**21888**	**22566**	**5562**	**474**	**66666**

ಪ್ರಶ್ನೆ ಸಂಖ್ಯೆ 3472ಕ್ಕೆ ಅನುಬಂಧ–2

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ ಹಾಗೂ ವೆಚ್ಚದ ವಿವರಗಳು

ಕ್ರಸಂ	ತಾಲ್ಲೂಕು	2017–18		2018–19		2019–20		2020–21 (ಫೆಬ್ರವರಿ–2021 ರ ಅಂತ್ಯಕ್ಕೆ)		ಒಟ್ಟು	
		ಸಂಖ್ಯೆ	ವೆಚ್ಚ (ರೂ. ಲಕ್ಷಗಳಲ್ಲಿ)	ಸಂಖ್ಯೆ	ವೆಚ್ಚ (ರೂ. ಲಕ್ಷಗಳಲ್ಲಿ)	ಸಂಖ್ಯೆ	ವೆಚ್ಚ (ರೂ. ಲಕ್ಷಗಳಲ್ಲಿ)	ಸಂಖ್ಯೆ	ವೆಚ್ಚ (ರೂ. ಲಕ್ಷಗಳಲ್ಲಿ)	ಸಂಖ್ಯೆ	ವೆಚ್ಚ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ದಕ್ಷಿಣ	1487	10682.86	998	7570.28	1115	8573.72	1438	10421.08	5038	37247.94
2	ಬೆಂಗಳೂರು ಉತ್ತರ	410	1228.77	351	1078.12	490	1442.66	588	1561.48	1839	5311.03
3	ಬೆಂಗಳೂರು ಪೂರ್ವ	647	4143.42	641	3939.26	467	2969.16	580	3755.75	2335	14807.59
4	ಆನೇಕಲ್	78	104.59	41	77.31	37	66.85	24	54.54	180	303.29
	ಒಟ್ಟು	**2622**	**16159.6**	**2031**	**12665**	**2109**	**13052.4**	**2630**	**15792.85**	**9392**	**57669.8**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3480
ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಲಿಂಗೇಗೌಡ ಕೆ. ಎಂ. (ಅರಸೀಕೆರೆ)
ಉತ್ತರಿಸಬೇಕಾದ ದಿನಾಂಕ	23-03-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಎಂ.ಎಸ್.ಐ.ಎಲ್ ಮಳಿಗೆಗಳನ್ನು ತೆರೆಯಲಾಗಿದೆ; ಯಾವ ಯಾವ ಪ್ರದೇಶದಲ್ಲಿ ತೆರೆಯಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)</td><td>ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಒಟ್ಟು 15 ಎಂ.ಎಸ್.ಐ.ಎಲ್ ಮಳಿಗೆಗಳನ್ನು ತೆರೆಯಲಾಗಿದ್ದು, ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಅಕ್ರಮ ಕಳ್ಳಭಟ್ಟಿ ತಯಾರಿಕೆ ಮತ್ತು ಮಾರಾಟ ಸಂಬಂಧ ಎಷ್ಟು ಮೊಕದ್ದಮೆಗಳು ದಾಖಲಿಸಲಾಗಿವೆ;</td><td>ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಅಕ್ರಮ ಕಳ್ಳಭಟ್ಟಿ ತಯಾರಿಕೆ ಮತ್ತು ಮಾರಾಟ ಸಂಬಂಧ ದಾಖಲಿಸಲಾದ ಮೊಕದ್ದಮೆಗಳ ವಿವರ ಕೆಳಗಿನಂತಿದೆ:
<table><tr><th>ಕ್ರ ಸಂ</th><th>ಅಬಕಾರಿ ವರ್ಷ</th><th>ದಾಖಲಿಸಿದ ಪ್ರಕರಣಗಳು</th></tr><tr><td>1</td><td>2018-19</td><td>46</td></tr><tr><td>2</td><td>2019-20</td><td>105</td></tr><tr><td>3</td><td>2020-21 (ಫೆಬ್ರವರಿ ಅಂತ್ಯಕ್ಕೆ)</td><td>31</td></tr><tr><td>ಒಟ್ಟು</td><td></td><td>182</td></tr></table></td></tr>
<tr><td>ಇ)</td><td>ಈ ಅಕ್ರಮ ದಂಧೆ ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಪೂರ್ಣ ವಿವರ ನೀಡುವುದು)</td><td>ಇಲಾಖೆಯು ಅಕ್ರಮ ಕಳ್ಳಭಟ್ಟಿ ತಯಾರಿಕೆ ಮತ್ತು ಮಾರಾಟ ಮಾಡುವುದನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಿ ಅಕ್ರಮ ಕಳ್ಳಭಟ್ಟಿ ತಯಾರಿಕೆಯಲ್ಲಿ ನಿರತರಾದವರ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 02 ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ತಡೆಯುವ ಕುರಿತು ಅಗತ್ಯ</td></tr>
</table>

			ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿದ್ದು ನಿರಂತರ ಗಸ್ತು ಕಾರ್ಯ ನಡೆಸಿ, ಅಕ್ರಮವಾಗಿ ಕಳ್ಳಭಟ್ಟಿ ಮಾರಾಟವಾಗದಂತೆ ಎಚ್ಚರಿಕೆ ವಹಿಸಲು ನಿರ್ದೇಶಿಸಲಾಗಿದೆ. ಕಳ್ಳಭಟ್ಟಿ ತಯಾರಿಕಾ ಕೇಂದ್ರಗಳ ಮೇಲೆ ವ್ಯವಸ್ಥಿತ ದಾಳಿ ನಡೆಸಿ ಕಳ್ಳಭಟ್ಟಿ ತಯಾರಿಕೆ ಪತ್ತೆ ಹಚ್ಚಿ ತಡೆಗಟ್ಟುವ ನಿಟ್ಟಿನಲ್ಲಿ ನಿರಂತರ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದೆ. ಕಳ್ಳಭಟ್ಟಿ ತಯಾರಿಕೆಗೆ ಬಳಸಲ್ಪಡುವ ಕಚ್ಚಾವಸ್ತುಗಳನ್ನು ಒದಗಿಸುವವರ ಮೇಲೂ ನಿಗಾ ಇಡಲಾಗಿದ್ದು, ಹಿಂದಿನ ಪ್ರಕರಣಗಳ ಪೂರ್ವಾಪರಾಧಿಗಳ ಚಲನವಲನಗಳ ಬಗ್ಗೆ ಅಬಕಾರಿ ಗಸ್ತಿನ ವೇಳೆಯಲ್ಲಿ ನಿಗಾ ಇಡಲಾಗಿದೆ. ಸರ್ಕಾರಿ/ಅರಣ್ಯ ಪ್ರದೇಶಗಳಲ್ಲಿ ಕಳ್ಳಭಟ್ಟಿ ತಯಾರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸದರಿ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ, ಅಕ್ರಮವೆಸಗದಂತೆ ಕ್ರಮ ಜರುಗಿಸಲಾಗಿದೆ.

ಆಇ 48 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಅನುಬಂಧ

ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ತೆರೆಯಲಾದ ಎಂ.ಎಸ್.ಐ.ಎಲ್ ಮದ್ಯ ಮಳಿಗೆಗಳ ವಿವರ

ಕ್ರ. ಸಂ	ತಾಲ್ಲೂಕು	ವರ್ಷ				ಒಟ್ಟು
		2017-18	2018-19	2019-20	2020-21	
1.	ಹಾಸನ ವಲಯ ನಂ-1	---	---	---	---	0
2.	ಹಾಸನ ವಲಯ ನಂ-2	---	---	---	---	0
3.	ಬೇಲೂರು ವಲಯ	---	---	---	ಹಳೇಬೀಡು ಗ್ರಾಮ, ಬೇಲೂರು ತಾಲ್ಲೂಕು	1
4.	ಚನ್ನರಾಯಪಟ್ಟಣ ವಲಯ	(1) ಎಂಶಿವರ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು (2) ನುಗ್ಗೇಹಳ್ಳಿ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು (3) ಚನ್ನರಾಯಪಟ್ಟಣ ಟೌನ್	1. ನಾಗಯ್ಯಕೊಪ್ಪಲು, ಚನ್ನರಾಯಪಟ್ಟಣ ತಾಲ್ಲೂಕು	---	---	4
5.	ಅರಸೀಕೆರೆ ವಲಯ	(1) ಬೆಂಡೆಕೆರೆ ಗ್ರಾಮ, ಅರಸೀಕೆರೆ ತಾಲ್ಲೂಕು (2) ಕೋಳಗುಂದ ಗ್ರಾಮ, ಅರಸೀಕೆರೆ ತಾಲ್ಲೂಕು	1.ಬಾಗೇಶಪುರ ಗ್ರಾಮ, ಅರಸೀಕೆರೆ ತಾಲ್ಲೂಕು 2. ಹಿರಿಯಾಳು ಕ್ರಾಸ್ ಚಗಚಗೆರೆ ಅರಸೀಕೆರೆ ತಾಲ್ಲೂಕು	ಎ.ಮಲ್ಲಾಪುರ, ಅರಸೀಕೆರೆ ತಾಲ್ಲೂಕು	---	5
6.	ಸಕಲೇಶಪುರ ವಲಯ	ಹೆತ್ತೂರು ಗ್ರಾಮ, ಸಕಲೇಶಪುರ ತಾಲ್ಲೂಕು	ರಾಘವೇಂದ್ರ ಬಡಾವಣೆ, ಸಕಲೇಶಪುರ ಟೌನ್	ಚಂಗಡಿಹಳ್ಳಿ ಗ್ರಾಮ, ಸಕಲೇಶಪುರ ತಾಲ್ಲೂಕು	---	3
7.	ಅರಕಲಗೂಡು ವಲಯ	ಕಾಳೇನಹಳ್ಳಿ ಗ್ರಾಮ, ಅರಕಲಗೂಡು ತಾಲ್ಲೂಕು	---	ಸರಗೂರು ಗ್ರಾಮ (ಸರಗೂರು ಗೇಟ್) ಅರಕಲಗೂಡು ಸರಗೂರು	---	2
8.	ಹೊಳೆನರಸೀಪುರ ವಲಯ	---	---	---	---	0
	ಒಟ್ಟು	7	4	3	1	15

ಆಇ 48 ಇಎಲ್‌ಕ್ಯೂ 2021

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3484
ಸದಸ್ಯರ ಹೆಸರು	:	ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ)
ಉತ್ತರಿಸುವ ದಿನಾಂಕ	:	23.03.2021

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಯಾವ ದಿನಾಂಕದಂದು ಶಂಕುಸ್ಥಾಪನೆ ಮಾಡಲಾಯಿತು;</td><td>ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ದಿನಾಂಕ:-18.07.1997 ರಂದು ಶಂಕುಸ್ಥಾಪನೆ ಮಾಡಲಾಗಿದೆ.</td></tr>
<tr><td>ಆ)</td><td>ಸದರಿ ಯೋಜನೆಯ ವಿವರಗಳನ್ನು ಹಾಗೂ ಯೋಜನೆಯನ್ವಯ ಕೊಪ್ಪಳ ಜಿಲ್ಲೆಯಲ್ಲಿ ನೀರಾವರಿಗೆ ಒಳಪಡುವ ಕ್ಷೇತ್ರದ ವಿವರಗಳನ್ನು ನೀಡುವುದು;</td><td>
ಗದಗ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳು ಬರ ಪೀಡಿತ ಪ್ರದೇಶಗಳಾಗಿರುವುದರಿಂದ, ಜಿಲ್ಲೆಗಳಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ಸಿಂಗಟಾಲೂರು ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ದಿನಾಂಕ 27.09.2014 ರಂದು ಕೃಷ್ಣಾ ನ್ಯಾಯಾಧೀಕರಣದ ಅಂತಿಮ ವರದಿ ಪ್ರಕಾರ ಯೋಜನೆಗೆ 16.0 ಟಿ.ಎಂ.ಸಿ ನೀರಿನ ಹಂಚಿಕೆ ಮಾಡಲಾಗಿರುತ್ತದೆ.. ಅದರಂತೆ ಈಗಾಗಲೇ ನೀರಾವರಿ ಸೌಲಭ್ಯ ಕಲ್ಪಿಸಿರುವ ಬಲಭಾಗದ ಅಚ್ಚುಕಟ್ಟು ಹಾಗೂ ಎಡಭಾಗದ ಮೊದಲನೇ ರೀಚ್-1 ವರೆಗಿನ ಅಚ್ಚುಕಟ್ಟನ್ನು ಹೊರತುಪಡಿಸಿ, ಎಡಭಾಗದ ಎರಡನೇ ಲಿಫ್ಟ್ ನಂತರ ಬರುವ ಗದಗ ಮುಖ್ಯ ಕಾಲುವೆ ರೀಚ್-2 ಮತ್ತು ಮುಂಡರಗಿ-ಕೊಪ್ಪಳ ಶಾಖಾ ಕಾಲುವೆ ಹಾಗೂ ಮೂರನೇ ಲಿಫ್ಟ್‌ನಂತರ ಬರುವ ಗದಗ ಮುಖ್ಯ ಕಾಲುವೆ ರೀಚ್-3ರಡಿಯಲ್ಲಿ ಬರುವ ಅಚ್ಚುಕಟ್ಟು ಪ್ರದೇಶವನ್ನು ಹನಿ ನೀರಾವರಿಗೆ (ಮೈಕ್ರೋಇರಿಗೇಷನ್) ಅಂದರೆ ಒಟ್ಟು 2,65,229ಎಕರೆ (1,07,380 ಹೆಕ್ಟೇರ್) ಭೂಪ್ರದೇಶಕ್ಕೆ ನೀರಾವರಿ ಕಲ್ಪಿಸುವ ರೂ. 5768.04 ಕೋಟಿಗಳ ಪರಿಷ್ಕೃತ ಅಂದಾಜಿಗೆ ದಿನಾಂಕ 05.01.2015 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅದರನ್ವಯ ತಾಲ್ಲೂಕವಾರು ಅಚ್ಚುಕಟ್ಟು ಪ್ರದೇಶದ ವಿವರ ಕೆಳಗಿನಂತೆ ಇರುತ್ತದೆ.
<table>
<tr><th>ಜಿಲ್ಲೆ</th><th>ತಾಲ್ಲೂಕು</th><th>ಯೋಜಿತ ಅಚ್ಚುಕಟ್ಟು ಪ್ರದೇಶ (ಎಕರೆಗಳಲ್ಲಿ)</th><th>ಸೂಕ್ಷ್ಮ ನೀರಾವರಿ ಒಳಗೊಂಡ ಹೆಚ್ಚುವರಿ ಅಚ್ಚುಕಟ್ಟು ಪ್ರದೇಶ (ಎಕರೆಗಳಲ್ಲಿ)</th><th>ಒಟ್ಟು (ಎಕರೆಗಳಲ್ಲಿ)</th></tr>
<tr><td>ಬಳ್ಳಾರಿ</td><td>ಹೂವಿನಹಡಗಲಿ</td><td>35791</td><td>-</td><td>35791</td></tr>
<tr><td rowspan="2">ಗದಗ</td><td>ಗದಗ</td><td>39073</td><td>27754</td><td>66827</td></tr>
<tr><td>ಮುಂಡರಗಿ</td><td>55186</td><td>37095</td><td>92281</td></tr>
<tr><td rowspan="2">ಕೊಪ್ಪಳ</td><td>ಕೊಪ್ಪಳ</td><td>40186</td><td>15520</td><td>55706</td></tr>
<tr><td>ಯಲ್ಬುರ್ಗ</td><td>-</td><td>14624</td><td>14624</td></tr>
<tr><td colspan="2">ಒಟ್ಟು</td><td>1,70,236</td><td>94,993</td><td>2,65,229
(1,07,380 ಹೆಕ್ಟೇರ್)</td></tr>
<tr><td colspan="4">ಇದುವರೆಗೆ ನೀರಾವರಿಗೊಳಪಡಿಸಲಾದ ಅಚ್ಚುಕಟ್ಟು ಪ್ರದೇಶ</td><td>48,381(19,580 ಹೆಕ್ಟೇರ್)</td></tr>
<tr><td colspan="4">ನೀರಾವರಿಗೊಳಪಡಿಸಲು ಬಾಕಿ ಇರುವ ಪ್ರದೇಶ</td><td>2,16,848 (87,800 ಹೆಕ್ಟೇರ್)</td></tr>
</table>
ಕೊಪ್ಪಳ ಜಿಲ್ಲೆಯಲ್ಲಿ 28,262 ಹೆಕ್ಟೇರ್ (69807 ಎಕರೆ) ಭೂಪ್ರದೇಶವು ನೀರಾವರಿಗೆ ಒಳಪಡುತ್ತದೆ.
ಸದರಿ ಯೋಜನೆಯ ಬಲಭಾಗದಲ್ಲಿ ಒಟ್ಟು 35791 ಎಕರೆ (14490 ಹೆಕ್ಟೇರ್) ಹಾಗೂ ಎಡಭಾಗದಲ್ಲಿ 12590 ಎಕರೆ (5097 ಹೆಕ್ಟೇರ್) ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಹರಿ ನೀರಾವರಿ ಮೂಲಕ ಕಲ್ಪಿಸಲಾಗಿದೆ. ಯೋಜಿತ ಪ್ರದೇಶದಲ್ಲಿ ಬಾಕಿ ಇರುವ 87,800 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸಬೇಕಾದ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.
</td></tr>
</table>

ಇ)	ಸದರಿ ಯೋಜನೆಯ ಸದ್ಯದ ಪ್ರಗತಿಯೇನು:ಎಡದಂಡೆ ಹಾಗೂ ಬಲದಂಡೆ ಕಾಮಗಾರಿಗಳ ವಿವರಗಳನ್ನು ನೀಡುವುದು;	ಸಿಂಗಟಾಲೂರು ಏತ ನೀರಾವರಿ ಯೋಜನೆಯ ಕಾಮಗಾರಿಗಳ ಪ್ರಸ್ತುತ ಹಂತ. ಬ್ಯಾರೇಜ್ ಕಾಮಗಾರಿಗಳು: ಹೂವಿನ ಹಡಗಲಿ ತಾಲೂಕಿನ ರಾಜವಾಳ ಮತ್ತು ಮುಂಡರಗಿ ತಾಲೂಕಿನ ಹಮ್ಮಿಗಿ ಗ್ರಾಮಗಳ ನಡುವೆ ತುಂಗಭದ್ರ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಮಾಡಲಾಗಿರುತ್ತದೆ. ಬಲಭಾಗದ ಕಾಮಗಾರಿಗಳು: ಈ ಭಾಗವು ಹೂವಿನಹಡಗಲಿ ತಾಲ್ಲೂಕು ವ್ಯಾಪ್ತಿಯಲ್ಲಿದ್ದು ಬಲಭಾಗದ ಮೊದಲನೇ ಹಂತದ ನೀರೆತ್ತುವ ಘಟಕ, ಎರಡನೇ ಹಂತದ ನೀರೆತ್ತುವ ಘಟಕ ಹಾಗೂ ಇದರಡಿಯಲ್ಲಿ ಬರುವ ಎಲ್ಲಾ ಕಾಲುವೆಗಳ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದ್ದು, 35,791 ಎಕರೆ (14490 ಹೆಕ್ಟೇರ್) ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಎಡಭಾಗದ ಕಾಮಗಾರಿಗಳು: • ಮುಂಡವಾಡ-ಹಮ್ಮಿಗಿ ನೀರೆತ್ತುವ ಘಟಕ, ಮೊದಲನೇ ಹಂತದ ನೀರೆತ್ತುವ ಘಟಕ, ಎರಡನೇ ಹಂತದ ನೀರೆತ್ತುವ ಘಟಕ ಹಾಗೂ ಮೂರನೇ ಹಂತದ ನೀರೆತ್ತುವ ಘಟಕಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಎಲ್ಲಾ ನೀರೆತ್ತುವ ಘಟಕಗಳು ಪ್ರಾರಂಭಿಸಲಾಗಿರುತ್ತದೆ. • ಮುಂಡವಾಡ-ಹಮ್ಮಿಗಿ ಶಾಖಾ ಕಾಲುವೆ (ಒಟ್ಟು ಉದ್ದ 24.18 ಕೀ.ಮಿ) ಹಾಗೂ ಗದಗ ಶಾಖಾ ಕಾಲುವೆ (ಒಟ್ಟು ಉದ್ದ 69.44 ಕೀ.ಮಿ) ಕಾಮಗಾರಿಗಳು ಪೂರ್ಣಗೊಂಡಿದ್ದು, ಗದಗ ಪಟ್ಟಣದವರೆಗೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿರುತ್ತದೆ. • ಮುಂಡರಗಿ-ಕೊಪ್ಪಳ ಶಾಖಾ ಕಾಲುವೆಯು 72.16 ಕಿ.ಮೀ ಉದ್ದವಿದ್ದು, ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ 0.00 ದಿಂದ 33.00 ಕಿ.ಮೀ ವರೆಗೆ ಕಾಲುವೆ ಹಾಗೂ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ವ್ಯಾಪ್ತಿಯಲ್ಲಿ 33.00 ಕಿ.ಮೀ ದಿಂದ 72.16 ಕಿ.ಮೀ ವರೆಗೆ ಕಾಲುವೆ ಕಾಮಗಾರಿಯು ಪೂರ್ಣಗೊಂಡಿದ್ದು, 72.16 ನೇ ಕಿ.ಮಿ ವರೆಗೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿರುತ್ತದೆ. • <u>ಆಲೂರು ಬನ್ನಿಕೊಪ್ಪ ನೀರೆತ್ತುವ ಘಟಕ</u> ಮುಂಡರಗಿ ಶಾಖಾ ಕಾಲುವೆಯ ಚೈ 32+160 ಕಿ.ಮೀ ನಿಂದ **off take** ಆಗುವ ಆಲೂರು-ಬನ್ನಿಕೊಪ್ಪ ನೀರೆತ್ತುವ ಘಟಕದ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಸೂಕ್ಷ್ಮ ನೀರಾವರಿ ಕಾಮಗಾರಿಯ ಪ್ರಸ್ತುತ ಹಂತ : ಒಟ್ಟು 2,16,848 ಎಕರೆ (87,800 ಹೆಕ್ಟೇರ್) ಭೂಪ್ರದೇಶಕ್ಕೆ ಸಿಂಗಟಾಲೂರು ಏತ ನೀರಾವರಿ ಯೋಜನೆಯಿಂದ ಹನಿ ನೀರಾವರಿ ಕಲ್ಪಿಸಲು ಯೋಜಿಸಲಾಗಿದ್ದು, ಇದರಲ್ಲಿ ಕೈಗೊಂಡಿರುವ ಕಾಮಗಾರಿಗಳ ಪ್ರಸ್ತುತ ಹಂತದ ವಿವರಗಳು ಕೆಳಗಿನಂತಿವೆ. ➢ ಪ್ರಸ್ತುತ **LBMC II Reach** ನ 10,080 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ➢ ಮುಂಡರಗಿ ಶಾಖಾ ಕಾಲುವೆಯ ಕಿ.ಮೀ 0.00 ದಿಂದ 24.39 ಕಿ.ಮೀ ವರೆಗೆ 12,767 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ ಕಾಮಗಾರಿಯನ್ನು ನಿಗಮದ ಅಂದಾಜು ಪರಿಶೀಲನಾ ಸಮಿತಿಯಲ್ಲಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ, ಪರಿಷ್ಕೃತ ಬೌಂಡರಿಯನ್ವಯ ಪ್ರಾರಂಭಿಸಲಾಗಿದ್ದು, ಆರಂಭಿಕ ಹಂತದಲ್ಲಿರುತ್ತದೆ. ➢ **LBMC III Reach** ನ ಒಟ್ಟು 28,800 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ 2 ಪ್ಯಾಕೇಜ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ➢ ಮುಂಡರಗಿ ಶಾಖಾ ಕಾಲುವೆಯ ಚೈ 32+160 ಕಿ.ಮೀ ನಿಂದ **off take** ಆಗುವ ಆಲೂರು-ಬನ್ನಿಕೊಪ್ಪ ನೀರೆತ್ತುವ ಘಟಕದಿಂದ 19427 ಹೆಕ್ಟೇರ್ ಭೂಪ್ರದೇಶಕ್ಕೆ ಹನಿ ನೀರಾವರಿ ಒದಗಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ➢ ಬಾಕಿ ಭೂಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ ಕಾಮಗಾರಿಗಳ ಅಂದಾಜು ಪತ್ರಿಕೆಗಳು ತಯಾರಿಕಾ ಹಂತದಲ್ಲಿದೆ.

ಈ)	ಕೊಪ್ಪಳ ಜಿಲ್ಲೆಗೆ ಹನಿ ನೀರಾವರಿ ಯೋಜನೆಯನ್ನು ನೀಡುವಲ್ಲಿ ಕೈಗೊಂಡಿರುವ ಕಾಮಗಾರಿಗಳು ಮಂದಗತಿಯಲ್ಲಿ ಸಾಗಿರಲು ಕಾರಣವೇನು;	ಕೊಪ್ಪಳ ಜಿಲ್ಲೆಯ ಯಲಬುರ್ಗಾ ಹಾಗೂ ಕೊಪ್ಪಳ ತಾಲ್ಲೂಕಿನ ಜಮೀನುಗಳಿಗೆ ಮುಂಡರಗಿ ಶಾಖಾ ಕಾಲುವೆಯಿಂದ ಹನಿ ನೀರಾವರಿ ಯೋಜನೆಯನ್ನು ಕಲ್ಪಿಸುವ ಕಾಮಗಾರಿಯನ್ನು ಟೆಂಡರ್ ಕರೆದು, ಜನವರಿ-2020 ರಲ್ಲಿ ಗುತ್ತಿಗೆ ವಹಿಸಲಾಗಿರುತ್ತದೆ. ನಂತರ ಕೋವಿಡ್-2019 ನಿಂದ ವಿವರವಾದ ಸರ್ವೆ ಕಾರ್ಯ ಕೈಗೊಳ್ಳುವಲ್ಲಿ ವಿಳಂಬವಾಗಿದ್ದು ಹಾಗೂ ತದನಂತರ ವಿನ್ಯಾಸಗಳನ್ನು ಅಂತಿಮಗೊಳಿಸುವಲ್ಲಿ ಸಹ ವಿಳಂಬವಾಗಿದ್ದರಿಂದ, ಸದರಿ ಹನಿ ನೀರಾವರಿ ಪ್ಯಾಕೇಜ್ ಕಾಮಗಾರಿಯು ವಿಳಂಬಗೊಂಡಿದ್ದು, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
ಉ)	ಈ ಜಿಲ್ಲೆಗೆ ಹನಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಸದರಿ ಕಾಮಗಾರಿಯನ್ನು ಯಾವಾಗ ಮುಕ್ತಾಯಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ? (ವಿವರಗಳನ್ನು ನೀಡುವುದು)	ಕೊಪ್ಪಳ ಜಿಲ್ಲೆಗೆ ಹನಿ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಕಾಮಗಾರಿಯನ್ನು 2023-24 ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಸಂಖ್ಯೆ:ಜಸಂಇ 88 ಎಂಎಲ್ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3492

ಉತ್ತರಿಸಬೇಕಾದ ದಿನಾಂಕ : 23/03/2021.

ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ. (ಮಂಗಳೂರು)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕ್ರೀಡಾಪಟುಗಳಿಗೆ ಸರ್ಕಾರ ವಿಮಾ ಸುರಕ್ಷೆಯನ್ನು ಒದಗಿಸಲಾಗುತ್ತಿದೆಯೇ; ಒದಗಿಸುತ್ತಿದ್ದಲ್ಲಿ, ಯಾವ ಕ್ರೀಡಾಪಟುಗಳು ವಿಮಾ ಸುರಕ್ಷಾ ವ್ಯಾಪ್ತಿಗೆ ಒಳಪಡುತ್ತಾರೆ; (ವಿವರ ನೀಡುವುದು)	ಕ್ರೀಡಾಪಟುಗಳಿಗೆ ಸರ್ಕಾರದಿಂದ ವಿಮಾ ಸುರಕ್ಷೆಯನ್ನು ಒದಗಿಸಲಾಗುತ್ತಿಲ್ಲ.
ಆ)	ದೇಸಿ ಗ್ರಾಮೀಣ ಕ್ರೀಡೆಗಳನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ.	ದೇಸಿ ಗ್ರಾಮೀಣ ಕ್ರೀಡೆಗಳನ್ನು ಉತ್ತೇಜಿಸಲು ಕೈಗೊಂಡಿರುವ ಕ್ರಮಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ರಾಜ್ಯದಲ್ಲಿರುವ ಕ್ರೀಡಾ ಸಂಸ್ಥೆಗಳಿಗೆ ಕ್ರೀಡಾ ಸಾಮಾಗ್ರಿಗಳು ಉಚಿತವಾಗಿ ವಿತರಿಸಿ ಪ್ರೋತ್ಸಾಹಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ; ಹಾಗಿದ್ದಲ್ಲಿ ಎಷ್ಟು ಕ್ರೀಡಾ ಸಂಸ್ಥೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗುವುದು?	ಇಲ್ಲ.

ವೈಎಸ್‌ಡಿ-ಇಬಿಬಿ/82/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಅನುಬಂಧ

ದೇಸೀ ಗ್ರಾಮೀಣ ಕ್ರೀಡೆಗಳನ್ನು ಉತ್ತೇಜಿಸಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳ ವಿವರಗಳು

- **ಗ್ರಾಮೀಣ ಕ್ರೀಡೋತ್ಸವ :** ಗ್ರಾಮೀಣ ಪ್ರದೇಶದಲ್ಲಿ ದೇಸಿ ಕ್ರೀಡೆಗಳನ್ನು ಸ್ಥಳೀಯ ಮಟ್ಟದಲ್ಲಿ ಪ್ರೋತ್ಸಾಹಿಸಲು ಕಾರ್ಯಕ್ರಮಗಳ ಆಯೋಜನೆ.

- **ಕ್ರೀಡಾ ವಿದ್ಯಾರ್ಥಿ ವೇತನ**: ರಾಜ್ಯಮಟ್ಟದಲ್ಲಿ ಪದಕ ವಿಜೇತರಾಗಿ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ.10,000/- ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

- **ಕುಸ್ತಿ ಹಬ್ಬ:** ಗ್ರಾಮೀಣ ದೇಸೀ ಕ್ರೀಡೆಯಾದ ಕುಸ್ತಿಯನ್ನು ಉಳಿಸಿ ಬೆಳೆಸಲು ಹಾಗೂ ಎಳೆಯ ಹಂತದಲ್ಲಿಯೇ ಪ್ರತಿಭೆಗಳನ್ನು ಗುರುತಿಸಲು ಕುಸ್ತಿ ಹಬ್ಬವನ್ನು ಹಮ್ಮಿಕೊಳ್ಳಲಾಗುತ್ತಿದೆ.

- **ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ:** ದೇಸೀ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಹಾಗೂ ನಗದನ್ನು ನೀಡಿ ಗೌರವಿಸಲಾಗುವುದು.

- **ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ**:ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಟುಗಳಿಗೆ ವಿಶೇಷ ನಗದು ಪುರಸ್ಕಾರ ವಿತರಿಸಲಾಗುತ್ತಿದೆ. ಅಂತಾರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ.5.00, 3.00 ಮತ್ತು 1.00 ಲಕ್ಷಗಳ ನಗದು ಪುರಸ್ಕಾರ ನೀಡಲಾಗುತ್ತಿದೆ.

- **ಗರಡಿ ಮನೆ ನಿರ್ಮಾಣ:** ಗ್ರಾಮೀಣ ಕುಸ್ತಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಗರಡಿ ಮನೆ ನಿರ್ಮಾಣ ಮತ್ತು ನವೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ.

- **ಯುವ ಕ್ರೀಡಾ ಮಿತ್ರ:** ಗ್ರಾಮೀಣ ಭಾಗದಲ್ಲಿ ಯುವಜನ ಚಟುವಟಿಕೆಗೆ ಉತ್ತೇಜನ ನೀಡಿ, ಕ್ರೀಡಾ ಸಂಸ್ಕೃತಿಯನ್ನು ಬೆಳೆಸಲು ಕ್ರೀಡಾ ಸಂಘಗಳಿಗೆ ಕ್ರೀಡಾ ಸಲಕರಣೆ ನೀಡಲಾಗುವುದು.

ವೈಎಸ್‌ಡಿ-ಇಬಿಬಿ/82/2021.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3498
ಸದಸ್ಯರ ಹೆಸರು	:	ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ ವಿಧಾನಸಭಾ ಕ್ಷೇತ್ರ)
ಉತ್ತರಿಸುವ ದಿನಾಂಕ	:	23.03.2021
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>1</td><td>ಅ) ಕಳೆದ ಮೂರು ವರ್ಷಗಳಲ್ಲಿ ನಾಗಠಾಣ ವಿಧಾನಸಭಾ ಕ್ಷೇತ್ರಕ್ಕೆ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾದ ಅನುದಾನವೆಷ್ಟು; ಇದರಲ್ಲಿ ಕೈಗೊಂಡ ಕಾಮಗಾರಿಗಳಾವುವು (ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ನಾಗಠಾಣ ವಿಧಾನಸಭಾ ಕ್ಷೇತ್ರಕ್ಕೆ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿವೆ ಮತ್ತು ಸದರಿ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳನ್ನುಅನುಬಂಧ-1ರಲ್ಲಿ ನೀಡಲಾಗಿದೆ.
(ರೂ. ಲಕ್ಷಗಳಲ್ಲಿ)
<table>
<tr><th>ಕ್ರಮ ಸಂಖ್ಯೆ</th><th>ವರ್ಷ</th><th>ಬಿಡುಗಡೆ ಯಾದ ಅನುದಾನ</th></tr>
<tr><td>1)</td><td>2017-18</td><td>7.73</td></tr>
<tr><td>2)</td><td>2018-19</td><td>52.63</td></tr>
<tr><td>3)</td><td>2019-20</td><td>13.50</td></tr>
</table></td></tr>
<tr><td>2</td><td>ಆ) ವಿಜಯಪುರ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಪ್ರದೇಶ ಬಯಲುಸೀಮೆಯಿದ್ದು, ರೈತರು ತಮ್ಮ ಹೊಲಗಳಲ್ಲಿ ಬದು ನಿರ್ಮಾಣ, ಸಮಪಾತಳಿ, ಚೆಕ್ ಡ್ಯಾಂ ಇನ್ನಿತರ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆಯಿದ್ದು ವರ್ಷವಾರು ನೀಡುವ ಅನುದಾನ ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td>-ಇಲ್ಲ-
ಆಯವ್ಯಯದಲ್ಲಿ ನಿಗದಿಪಡಿಸಿದಂತೆ ಅನುದಾನವನ್ನು ಮಂಡಳಿಗೆ ಬಿಡುಗಡೆಗೊಳಿಸಲಾಗುತ್ತಿದೆ. ಮಂಡಳಿಗೆ ಬಿಡುಗಡೆಯಾದ ಅನುದಾನವನ್ನು ಮಂಡಳಿ ವ್ಯಾಪ್ತಿಗೆ ಒಳಪಡುವ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಮಂಡಳಿಯಿಂದ ಹಂಚಿಕೆ ಮಾಡಲಾಗುತ್ತದೆ.</td></tr>
<tr><td>3</td><td>ಇ) ನಾಗಠಾಣ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಯೋಜನೆಯಡಿ ಬಿಡುಗಡೆಯಾದ ಅನುದಾನವೆಷ್ಟು;</td><td>ನಾಗಠಾಣ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.
(ರೂ. ಲಕ್ಷಗಳಲ್ಲಿ)
<table>
<tr><th>ಕ್ರಮ ಸಂಖ್ಯೆ</th><th>ವರ್ಷ</th><th>ಬಿಡುಗಡೆಯಾದ ಅನುದಾನ</th></tr>
<tr><td>1</td><td>2017-18</td><td>200.00</td></tr>
<tr><td>2</td><td>2018-19</td><td>161.08</td></tr>
<tr><td>3</td><td>2019-20</td><td>61.98</td></tr>
</table></td></tr>
</table>

4	ಈ) ಈ ಯೋಜನೆಯಡಿ ಕೈಗೊಳ್ಳಬಹುದಾದ ಕಾಮಗಾರಿಗಳು ಯಾವುವು? (ಕಾಮಗಾರಿಗಳ ಮಾರ್ಗಸೂಚಿಗಳ ಪ್ರತಿಯನ್ನು ಒದಗಿಸುವುದು)	ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿಯ ಅನುಬಂಧ-IIIರಲ್ಲಿ ಕೈಗೊಳ್ಳಬಹುದಾದಂತಹ ಕಾಮಗಾರಿಗಳ ಪಟ್ಟಿಯನ್ನು ನೀಡಲಾಗಿದೆ. ಪ್ರತಿಯನ್ನು ಲಗತ್ತಿಸಲಾಗಿದೆ.

ಸಂಖ್ಯೆ: ಪಿಡಿಎಸ್ 22 ಪಿಟಿಪಿ 2021

(ಡಾ|| ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 3498 ರ ಅನುಬಂಧ-1

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ

2018-19ನೇ ಸಾಲಿನಿಂದ 2020-21ನೇ ಸಾಲಿನವರೆಗೆನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳ ವಿವರ

ಕ್ರ. ಸಂ.	ವರ್ಷ	ಯೋಜನೆ	ಕಾಮಗಾರಿಗಳ ವಿವರ
1.	2017-18	ಸಾಮಾನ್ಯ ಯೋಜನೆ	ಇಂಡಿ ತಾಲ್ಲೂಕಿನ ಹಾವಿನಾಳ ಗ್ರಾಮದ ಸರ್ಕಾರಿ ಗಾವಠಾಣ ಹರಿಗೆ ಚೆಕ್‌ಡ್ಯಾಂ-1 ನಿರ್ಮಾಣ
2.	2017-18		ಇಂಡಿ ತಾಲ್ಲೂಕಿನ ಹಾವಿನಾಳ ಗ್ರಾಮದ ಸರ್ಕಾರಿ ಗಾವಠಾಣ ಹರಿಗೆ ಚೆಕ್‌ಡ್ಯಾಂ-2 ನಿರ್ಮಾಣ
3.	2017-18		ಇಂಡಿ ತಾಲ್ಲೂಕಿನ ತದ್ದೇವಾಡಿ ಗ್ರಾಮದ ಊರ ಮುಂದಿನ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ
4.	2017-18		ಇಂಡಿ ತಾಲ್ಲೂಕಿನ ಹಾವಿನಾಳ ಗ್ರಾಮದ ಹೆಬ್ಬಾಳ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ
5.	2017-18	ವಿಶೇಷ ಘಟಕ ಯೋಜನೆ	ಇಂಡಿ ತಾಲ್ಲೂಕಿನ ಹಾವಿನಾಳ ಗ್ರಾಮದ ಜಟ್ಟೆಪ್ಪ ಬನಸೋಡೆ ಇವರ ಜಮೀನಿನ ಹತ್ತಿರದ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ
6.	2017-18		ಇಂಡಿ ತಾಲ್ಲೂಕಿನ ಜೀಗಜೀವಣಿ ಗ್ರಾಮದ ಮಾಚು ಚಿಂಗು ಲಮಾಣಿ ಇವರ ಜಮೀನಿನ ಹತ್ತಿರದ ಹರಿಗೆ ನಾಲಾ ಬಂಡಿಂಗ್ ನಿಮಾಣ
7.	2018-19	ಸಾಮಾನ್ಯ ಯೋಜನೆ	ಇಂಡಿ ತಾಲ್ಲೂಕಿನ ಹಾವಿನಾಳ ಸೇತುವೆ ಹತ್ತಿರ ಹರಿಗೆ ಗಾವಠಾಣದಲ್ಲಿ ನಾಲಾ ಬದು-I
8.	2018-19		ಇಂಡಿ ತಾಲ್ಲೂಕಿನ ಹಾವಿನಾಳ ಸೇತುವೆ ಹತ್ತಿರ ಹರಿಗೆ ಗಾವಠಾಣದಲ್ಲಿ ನಾಲಾ ಬದು-II
9.	2018-19		ಇಂಡಿ ತಾಲ್ಲೂಕಿನ ಹಾವಿನಾಳ ಸೇತುವೆ ಹತ್ತಿರ ಹರಿಗೆ ಗಾವಠಾಣದಲ್ಲಿ ನಾಲಾ ಬದು-III
10.	2018-19		ಇಂಡಿ ತಾಲ್ಲೂಕಿನ ಉಮರಜ ಗ್ರಾಮದ ಸ.ನಂ. 94 ರ ಹತ್ತಿರ ಹರಿಗೆ ಪಿ.ಟಿ. ನಿರ್ಮಾಣ
11.	2018-19	ವಿಶೇಷ ಘಟಕ ಯೋಜನೆ	ಇಂಡಿ ತಾಲ್ಲೂಕಿನ ಹಾವಿನಾಳ ಗ್ರಾಮದ ಗಾವಠಾಣದ ಹತ್ತಿರ ಹರಿಗೆ ನಾಲಾಬದು
12.	2018-19		ಇಂಡಿ ತಾಲ್ಲೂಕಿನ ಹಾವಿನಾಳ ಗ್ರಾಮದ ನಿವರಗಿ ಟ್ಯಾಂಕ್‌ನ ಹತ್ತಿರ ಹರಿಗೆ ನಾಲಾಬದು
13.	2018-19		ಇಂಡಿ ತಾಲ್ಲೂಕಿನ ಉಮರಜ ಗ್ರಾಮದ ಸ.ನಂ. 93 ರ ಹರಿಗೆ ಸಿ.ಡಿ. ನಿರ್ಮಾಣ
14.	2018-19		ಇಂಡಿ ತಾಲ್ಲೂಕಿನ ರೇವತಗಾಂವ ಗ್ರಾಮದ ದೇಸಾಯಿಯವರ ಹೊಲದ ಹಳ್ಳದ ಬ್ರಿಜ್ ಹತ್ತಿರ ಹರಿಗೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ
15.	2018-19		ಇಂಡಿ ತಾಲ್ಲೂಕಿನ ರೇವತಗಾಂವ ಗ್ರಾಮದ ದೇಸಾಯಿಯವರ ಹೊಲದ ಹಳ್ಳದ ಬ್ರಿಜ್ ಹತ್ತಿರ ಹರಿಗೆ ನಾಲಾಬಂಡಿಂಗ್-1 ಕಾಮಗಾರಿ
16.	2018-19		ಇಂಡಿ ತಾಲ್ಲೂಕಿನ ರೇವತಗಾಂವದಿಂದ ಹಾಲಳ್ಳಿಗೆ ಹೋಗುವ ರಸ್ತೆ ಎಡಕ್ಕೆ ಹರಿಗೆ ನಾಲಾಬಂಡಿಂಗ್-1 ಕಾಮಗಾರಿ
17.	2018-19		ಇಂಡಿ ತಾಲ್ಲೂಕಿನ ರೇವತಗಾಂವದಿಂದ ಹಾಲಳ್ಳಿಗೆ ಹೋಗುವ ರಸ್ತೆ ಎಡಕ್ಕೆ ಹರಿಗೆ ನಾಲಾಬಂಡಿಂಗ್-2 ಕಾಮಗಾರಿ
18.	2018-19		ಇಂಡಿ ತಾಲ್ಲೂಕಿನ ಚಡಚಣದಿಂದ ಸೊಡ್ಡಿ ಗ್ರಾಮಕ್ಕೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-1 ಕಾಮಗಾರಿ

19.	2018-19	ಗಿರಿಜನ ಉಪಯೋಜನೆ	ವಿಜಯಪುರ ತಾಲ್ಲೂಕಿನ ಹೆಗಡಿಹಾಳ ಗ್ರಾಮದ ರಿ.ಸ.ನಂ. 132/2 ರಲ್ಲಿ ನಾಲಾಬದು-1
20.	2018-19		ವಿಜಯಪುರ ತಾಲ್ಲೂಕಿನ ಹೆಗಡಿಹಾಳ ಗ್ರಾಮದ ಚೆನ್ನಪ್ಪ ರುದ್ರಪ್ಪ ಅಳಲದಿನ್ನಿ ಇವರ ಜಮೀನಿನ ಹತ್ತಿರದ ಹರಿಗೆ ನಾಲಾ ಬಂಡಿಂಗ್ ನಿರ್ಮಾಣ
21.	2018-19		ಇಂಡಿ ತಾಲ್ಲೂಕಿನ ಸಾತಲಗಾಂವ ಗ್ರಾಮದ ನಾಯಿಕೊಡೆಯವರ (ಬೇಡರ) ಹೊಲದ ಹತ್ತಿರ ಹರಿಗೆ ನಾಲಾಬದು
22.	2019-20	ಸಾಮಾನ್ಯ ಯೋಜನೆ	ಇಂಡಿ ತಾಲ್ಲೂಕು ಲೋಣಿ ಕ್ರಾಸದಿಂದ ಶಿಗಣಾಪುರಕ್ಕೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-1
23.	2019-20		ಇಂಡಿ ತಾಲ್ಲೂಕು ಬರಡೋಲ ಗ್ರಾಮದ ಲೋಣಿ ಕ್ರಾಸದಿಂದ ಶಿಗಣಾಪುರಕ್ಕೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-2
24.	2019-20		ಇಂಡಿ ತಾಲ್ಲೂಕು ಬರಡೋಲ ಗ್ರಾಮದ ಲೋಣಿ ಕ್ರಾಸದಿಂದ ಶಿಗಣಾಪುರಕ್ಕೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-3
25.	2019-20		ಇಂಡಿ ತಾಲ್ಲೂಕು ಬರಡೋಲ ಗ್ರಾಮದ ಗುಮಾಸ್ತೆಯವರ ಹೊಲದ ಹತ್ತಿರ ಹರಿಗೆ ನಾಲಾಬಂಡಿಂಗ್-4
26.	2019-20		ಇಂಡಿ ತಾಲ್ಲೂಕು ದುಮಕನಾಳ ಗ್ರಾಮದ ಲೋಣಿ ಕ್ರಾಸದಿಂದ ಶಿಗಣಾಪುರಕ್ಕೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-1
27.	2019-20		ಇಂಡಿ ತಾಲ್ಲೂಕು ಹಾವಿನಾಳ ಗ್ರಾಮದ ಕಾಶಿರಾಯ ಕಾಮಗೊಂಡ ಇವರ ಹೊಲದ ಹತ್ತಿರ ಹರಿಗೆ ನಾಲಾಬಂಡಿಂಗ್-1
28.	2019-20		ಇಂಡಿ ತಾಲ್ಲೂಕು ಹಾವಿನಾಳ ಗ್ರಾಮದ ಕ್ರಾಸದಿಂದ ಪೂರ್ವ ದಿಕ್ಕಿಗೆ ಕಾಮಗೊಂಡವರ ಹೊಲಕ್ಕೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-2
29.	2019-20		ಇಂಡಿ ತಾಲ್ಲೂಕು ಹಾವಿನಾಳ ಗ್ರಾಮದ ಕ್ರಾಸದಿಂದ ಪೂರ್ವ ದಿಕ್ಕಿಗೆ ಕಾಮಗೊಂಡವರ ಹೊಲಕ್ಕೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-3
30.	2019-20		ಇಂಡಿ ತಾಲ್ಲೂಕು ಹಾವಿನಾಳ ಗ್ರಾಮದ ಕ್ರಾಸದಿಂದ ಪೂರ್ವ ದಿಕ್ಕಿಗೆ ಕಾಮಗೊಂಡವರ ಹೊಲಕ್ಕೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-4
31.	2019-20		ಇಂಡಿ ತಾಲ್ಲೂಕು ಹಾವಿನಾಳ ಗ್ರಾಮದ ಬಗಲಿ(ವಾಗಮೋರೆ) ಹೊಲದ ಹಿಂದಿನ ಹರಿಗೆ ನಾಲಾಬಂಡಿಂಗ್-5
32.	2019-20		ಇಂಡಿ ತಾಲ್ಲೂಕು ಹಾವಿನಾಳ ಗ್ರಾಮದ ಚಡಚಣದಿಂದ ನೀವರಗಿ ಹಳೆ ರಸ್ತೆ ಇಟ್ಟಿಗೆ ಬಟ್ಟಿಯಿಂದ ನೀರಿನ ಟಾಕಿ ಮಧ್ಯದಲ್ಲಿ ನಾಲಾಬಂಡಿಂಗ್-6
33.	2019-20		ಇಂಡಿ ತಾಲ್ಲೂಕು ಹಾವಿನಾಳ ಗ್ರಾಮದ ಚಡಚಣದಿಂದ ನೀವರಗಿ ಹಳೆ ರಸ್ತೆ ಇಟ್ಟಿಗೆ ಬಟ್ಟಿಯಿಂದ ನೀರಿನ ಟಾಕಿ ಮಧ್ಯದಲ್ಲಿ ನಾಲಾಬಂಡಿಂಗ್-7
34.	2019-20	ಸಾಮಾನ್ಯ ಯೋಜನೆ	ಇಂಡಿ ತಾಲ್ಲೂಕು ಕೊಂಕಣಗಾಂವ ಗ್ರಾಮದ ಚಡಚಣದಿಂದ ಉಮದಿಗೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-1
35.	2019-20		ಇಂಡಿ ತಾಲ್ಲೂಕು ಕೊಂಕಣಗಾಂವ ಗ್ರಾಮದ ಚಡಚಣದಿಂದ ಉಮದಿಗೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-2
36.	2019-20		ಇಂಡಿ ತಾಲ್ಲೂಕು ಕೊಂಕಣವಾಂವ ಗ್ರಾಮದ ಚಡಚಣದಿಂದ ಉಮದಿಗೆ ಹೋಗುವ ರಸ್ತೆ ಬದಿ ಹರಿಗೆ ನಾಲಾಬಂಡಿಂಗ್-3
37.	2019-20		ಇಂಡಿ ತಾಲ್ಲೂಕು ಸಾತಗಾಂವ ಗ್ರಾಮದ ಗುಡ್ಡದ ಹರಿಗೆ ನಾಲಾಬಂಡಿಂಗ್-1
38.	2019-20		ಇಂಡಿ ತಾಲ್ಲೂಕು ಸಾತಗಾಂವ ಗ್ರಾಮದ ಗುಡ್ಡದ ಹರಿಗೆ ನಾಲಾಬಂಡಿಂಗ್-2
39.	2019-20		ಇಂಡಿ ತಾಲ್ಲೂಕು ಸಾತಗಾಂವ ಗ್ರಾಮದ ಗುಡ್ಡದ ಹರಿಗೆ ನಾಲಾಬಂಡಿಂಗ್-3
40.	2019-20		ಇಂಡಿ ತಾಲ್ಲೂಕು ಶಿಗಣಾಪೂರ ಗ್ರಾಮದ ಚೋರಗಿಯವರ ಹೊಲದ ಹತ್ತಿರ ಹರಿಗೆ ನಾಲಾಬಂಡಿಂಗ್-1
41.	2019-20		ಇಂಡಿ ತಾಲ್ಲೂಕು ಶಿಗಣಾಪೂರ ಗ್ರಾಮದ ಚೋರಗಿಯವರ ಹೊಲದ ಹತ್ತಿರ ಹರಿಗೆ ನಾಲಾಬಂಡಿಂಗ್-2

ನಿರ್ದೇಶಕರು
ಪ್ರದೇಶಾಭಿವೃದ್ಧಿ ಮಂಡಳಿ
ಯೋಜನಾ ಇಲಾಖೆ

ಅನುಬಂಧ-III

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಕೈಗೊಳ್ಳಬಹುದಾದಂತಹ ಕಾಮಗಾರಿಗಳ ಪಟ್ಟಿ

1. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು:

ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಬಹುದಾಗಿದೆ.

1) ಶಾಲಾ ಕೊಠಡಿಗಳ ನಿರ್ಮಾಣ
2) ಕಾಂಪೌಂಡ್ ಗೋಡೆಗಳ ನಿರ್ಮಾಣ
3) ಆಟದ ಮೈದಾನಗಳ ಅಭಿವೃದ್ಧಿ
4) ಮೂಲಭೂತ ಸೌಕರ್ಯಗಳನ್ನೊಳಗೊಂಡ ಸುಸಜ್ಜಿತ ಗ್ರಂಥಾಲಯಗಳ ನಿರ್ಮಾಣ
5) ಸುಸಜ್ಜಿತ ಪ್ರಯೋಗಾಲಯಗಳ ನಿರ್ಮಾಣ
6) ಬಯಲು ರಂಗಮಂದಿರಗಳ ನಿರ್ಮಾಣ
7) ಸೈಕಲ್ ಸ್ಟ್ಯಾಂಡ್‌ಗಳ ನಿರ್ಮಾಣ
8) ಶಾಲೆಗಳ ಹತ್ತಿರ ಶಿಕ್ಷಕರಿಗೆ ವಸತಿ ಗೃಹಗಳ ನಿರ್ಮಾಣ
9) RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
10) ಗಣಕಯಂತ್ರ ಮತ್ತು ಪ್ರಿಂಟರ್ ಇತ್ಯಾದಿಗಳನ್ನು ಒದಗಿಸುವುದು.
11) ಬೋಧನೋಪಕರಣಗಳು ಹಾಗೂ ಆಟೋಪಕರಣಗಳನ್ನು ಒದಗಿಸುವುದು.

2. ಉನ್ನತ ಶಿಕ್ಷಣ

ಸರ್ಕಾರಿ ಕಾಲೇಜುಗಳು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಸರ್ಕಾರಿ ಔದ್ಯೋಗಿಕ ಸಂಸ್ಥೆಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಬಹುದು.

1) ತರಗತಿ ಕೊಠಡಿಗಳ ನಿರ್ಮಾಣ
2) ಕಾಂಪೌಂಡ್ ಗೋಡೆಗಳ ನಿರ್ಮಾಣ
3) ಗ್ರಂಥಾಲಯ, ಪ್ರಯೋಗಾಲಯ ಹಾಗೂ ಶೌಚಾಲಯಗಳ ನಿರ್ಮಾಣ
4) ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಿಗೆ ಉಪಕರಣಗಳನ್ನು ಒದಗಿಸುವುದು.
5) RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
6) ಆವರಣದಲ್ಲಿ ರಸ್ತೆ, ಆಟದ ಮೈದಾನ ಮತ್ತು ಉಪಾಹಾರ ಮಂದಿರಗಳಂಥ ಮೂಲಸೌಕರ್ಯಗಳನ್ನು ಒದಗಿಸುವುದು.

3. ಕ್ರೀಡೆಗಳು ಮತ್ತು ಯುವಜನ ಸೇವೆಗಳು

1) ಕ್ರೀಡಾಂಗಣಗಳ ನಿರ್ಮಾಣ
2) ಕ್ರೀಡೆಗಳಿಗೆ ಸಂಬಂಧಿಸಿದ ಪರಿಕರಗಳ ಪೂರೈಕೆ
3) ಜಾಗಿಂಗ್ ಟ್ರ್ಯಾಕ್, ಟೆನ್ನಿಸ್ ಕೋರ್ಟ್, ಬಾಸ್ಕೆಟ್ ಬಾಲ್ ಕೋರ್ಟ್ ಮುಂತಾದವುಗಳ ಅಭಿವೃದ್ಧಿ

4. ಆರೋಗ್ಯ

1) ಪ್ರಾಥಮಿಕ ಆರೋಗ್ಯ ಕೇಂದ್ರ, ಸಮೂದಾಯ ಆರೋಗ್ಯ ಕೇಂದ್ರ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ
2) ಆಸ್ಪತ್ರೆಗಳಿಗೆ ಕಾಂಪೌಂಡ್ ಗೋಡೆಗಳ ನಿರ್ಮಾಣ
3) ಆಸ್ಪತ್ರೆಗಳಿಗೆ ಬೇಕಾದ ಪರಿಕರಗಳನ್ನು ಪೂರೈಸುವುದು.
4) ರಕ್ತ ನಿಧಿಗಳ ಸ್ಥಾಪನೆ
5) ಆಂಬ್ಯುಲೆನ್ಸ್ ವಾಹನಗಳ ಖರೀದಿ
6) ಆಸ್ಪತ್ರೆಗಳಲ್ಲಿ ಶೌಚಾಲಯಗಳ ನಿರ್ಮಾಣ
7) ಆಸ್ಪತ್ರೆಗಳಲ್ಲಿ RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
8) ವೈದ್ಯಾಧಿಕಾರಿಗಳು ಮತ್ತು ANMಗಳಿಗೆ ವಸತಿಗೃಹಗಳ ನಿರ್ಮಾಣ

5. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ

1) ಅಂಗವಿಕಲರಿಗೆ ಪರಿಕರಗಳ ಪೂರೈಕೆ
2) ಅಂಗನವಾಡಿ ಕೇಂದ್ರಗಳ ನಿರ್ಮಾಣ
3) ಅಂಗನವಾಡಿ ಕೇಂದ್ರಗಳಿಗೆ ಕಾಂಪೌಂಡ್ ಗೋಡೆಗಳ ನಿರ್ಮಾಣ
4) RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
5) ಅಂಗನವಾಡಿಗಳಿಗೆ ತಲಾ ರೂ.5,000/- ಗಳ ವರೆಗಿನ ಆಟದ ಉಪಕರಣಗಳ ಪೂರೈಕೆ
6) ವೃದ್ಧಾಶ್ರಮ, ಅನಾಥಾಶ್ರಮ, ನಿರ್ಗತಿಕರಿಗೆ ವಸತಿ ನಿಲಯ ಇತ್ಯಾದಿಗಳ ನಿರ್ಮಾಣ

6. ಸಮಾಜ ಕಲ್ಯಾಣ/ಹಿಂದುಳಿದ ವರ್ಗ/ಅಲ್ಪಸಂಖ್ಯಾತರು

1) ಸರ್ಕಾರಿ ಹಾಸ್ಟೆಲ್‌ಗಳ ನಿರ್ಮಾಣ
2) ಹಾಸ್ಟೆಲ್‌ಗಳಿಗೆ ಕಾಂಪೌಂಡ್ ಗೋಡೆಗಳ ನಿರ್ಮಾಣ
3) ಮೆಟ್ರಿಕ್ ನಂತರದ ವಿದ್ಯಾರ್ಥಿ/ವಿಧ್ಯಾರ್ಥಿನಿಯರ ಹಾಸ್ಟೆಲ್‌ನ ಗ್ರಂಥಾಲಯಕ್ಕೆ ಪುಸ್ತಕಗಳು ಮತ್ತು ಉಪಕರಣಗಳ ಪೂರೈಕೆ.
4) ಹಾಸ್ಟೆಲ್‌ಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
5) ಹಾಸ್ಟೆಲ್‌ಗಳಲ್ಲಿ ಶೌಚಾಲಯಗಳ ನಿರ್ಮಾಣ

7. ಪಶುಸಂಗೋಪನೆ

1) ಪಶುವೈದ್ಯಕೀಯ ಆಸ್ಪತ್ರೆ, ಪಶುವೈದ್ಯಕೀಯ ಔಷಧಾಲಯ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ನಿರ್ಮಾಣ
2) ಪಶುವೈದ್ಯಕೀಯ ಆಸ್ಪತ್ರೆ, ಪಶುವೈದ್ಯಕೀಯ ಔಷಧಾಲಯ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ ಕಾಂಪೌಂಡ್ ಗೋಡೆಗಳ ನಿರ್ಮಾಣ
3) ಹಳ್ಳಿಗಳಲ್ಲಿ ಪಶು ಸಂತತಿ ಅಭಿವೃದ್ಧಿ ಕೇಂದ್ರಗಳಿಂದ ಮುಖ್ಯರಸ್ತೆಗೆ ಸೇರುವ ರಸ್ತೆ ನಿರ್ಮಾಣ
4) ಪಶು ವೈದ್ಯಕೀಯ ಆಸ್ಪತ್ರೆಯ ಸಿಬ್ಬಂದಿಗಳಿಗೆ ವಸತಿಗೃಹಗಳ ನಿರ್ಮಾಣ
5) ಕೃತಕ ಗರ್ಭಧಾರಣಾ ಕೇಂದ್ರಗಳ ಕಟ್ಟಡ ನಿರ್ಮಾಣ

8. ತೋಟಗಾರಿಕೆ

1) ನಗರ ಪ್ರದೇಶಗಳಲ್ಲಿ ಉದ್ಯಾನವನಗಳ ಅಭಿವೃದ್ಧಿ
2) ಮಾರುಕಟ್ಟೆ ಆವರಣಗಳಲ್ಲಿ ಗೋದಾಮುಗಳ ನಿರ್ಮಾಣ

9. ವಸತಿ

1) ಪೋಲೀಸ್ ಇಲಾಖೆಗೆ ಗರುಡ/ಹೊಯ್ಸಳ ಮಾದರಿಯ ವಾಹನಗಳನ್ನು ಒದಗಿಸುವುದು (ಚಾಲಕ ಮತ ನಿರ್ವಹಣೆ ವೆಚ್ಚ ಹೊರತುಪಡಿಸಿ)

10. ಮೂಲಭೂತ ಸೌಕರ್ಯ ಅಭಿವೃದ್ಧಿಗಳು

1) ರಸ್ತೆ ಸಂಪರ್ಕ: ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಎಲ್ಲಾ ಹವಾಮಾನಕ್ಕೆ ಹೊಂದಿಕೊಳ್ಳುವಂತಹ ರಸ್ತೆಗಳು
2) ತಾಲ್ಲೂಕು ಮಟ್ಟದಲ್ಲಿ ಸಾರ್ವಜನಿಕ ವಿದ್ಯುತ್ ಚಿತಾಗಾರ ಮತ್ತು ಸ್ಮಶಾನಗಳಿಗೆ ಭೂಮಿ ಒದಗಿಸುವುದು.
3) ಕಾಲು ಸೇತುವೆಗಳ ನಿರ್ಮಾಣ
4) ಬಸ್ ತಂಗುದಾಣಗಳ ನಿರ್ಮಾಣ
5) ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ:
ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ಕೇಂದ್ರಗಳ ವಿಕೇಂದ್ರೀಕರಣ

11. ಕೊಳಚೆ ಪ್ರದೇಶಗಳಿಗೆ ಒದಗಿಸಬಹುದಾದ ಸೌಲಭ್ಯಗಳು

1) ಕೊಳಚೆ ಪ್ರದೇಶಗಳ ಕುಶಲಕರ್ಮಿಗಳಿಗೆ ಸಾಮಾನ್ಯ ಶೆಡ್ ಒದಗಿಸುವುದು.
2) ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಗುಂಪು ವಸತಿ ಯೋಜನೆ ಅಡಿ ನಿರ್ಮಿಸಲಾದ ವಸತಿ ಪ್ರದೇಶಗಳಲ್ಲಿ ಮೂಲ ಸೌಕರ್ಯ ಒದಗಿಸುವುದು.

12. ಹಳ್ಳಿಗಳಲ್ಲಿ RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.

13. ಪ್ರವಾಸೋದ್ಯಮ

1) ಪ್ರವಾಸಿ ಸ್ಥಳಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸುವುದು.
2) ಐತಿಹಾಸಿಕ ಮತ್ತು ಪಾರಂಪರಿಕ ಸ್ಥಳಗಳ ಸೌಂದರ್ಯ ರಕ್ಷಣೆಗೆ ಸಂಬಂಧಿಸಿದ ಕಾಮಗಾರಿಗಳು

14. ಸಮುದಾಯ ಭವನಗಳ ನಿರ್ಮಾಣ

15. ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣ ಮತ್ತು ಸಂಚಾರಿ ಗ್ರಂಥಾಲಯಗಳನ್ನು ಒದಗಿಸುವುದು.

ಕಾಮಗಾರಿಗಳನ್ನು ಸರ್ಕಾರಿ ಏಜೆನ್ಸಿಗಳಾದ ಲೋಕೋಪಯೋಗಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದಂಥ ಕೆಆರ್ಐಡಿಎಲ್ ಮತ್ತು ನಿರ್ಮಿತಿ ಕೇಂದ್ರಗಳ ಮೂಲಕ ಅನುಷ್ಠಾನಗೊಳಿಸುವುದು.

ನಿರ್ದೇಶಕರು
ಪ್ರದೇಶಾಭಿವೃದ್ಧಿ ಮ... ಕಿ
ಯೋಜನಾ ಇಲಾಖೆ
7ನೇ ಮಹಡಿ, ಬಹುಮಹಡಿ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **3501**

ಉತ್ತರಿಸಬೇಕಾದ ದಿನಾಂಕ : **23/03/2021.**

ಸದಸ್ಯರ ಹೆಸರು : **ಶ್ರೀ ದೇವಾನಂದ್ ಫುಲ್‌ಸಿಂಗ್ ಚವಾಣ್ (ನಾಗಠಾಣ)**

ಉತ್ತರಿಸುವ ಸಚಿವರು : **ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.**

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಬಿಡುಗಡೆಯಾದ ಅನುದಾನ ಎಷ್ಟು; ಅದರಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು; (ವಿವರ ನೀಡುವುದು)	ವಿಜಯಪುರ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರ ಕೆಳಕಂಡಂತಿದೆ:-

(ರೂ.ಲಕ್ಷಗಳಗಲ್ಲಿ)

ವರ್ಷ	2018-19	2019-20	2020-21
ಜಿಲ್ಲಾ ಪಂಚಾಯತ್ ಅನುದಾನ	184.43	202.56	156.19
ವಿಶೇಷ ಘಟಕ ಯೋಜನೆಯಡಿಯಲ್ಲಿ (ಕೆ.ಬಿ.ಜೆ.ಎನ್.ಎಲ್)	1000.00	-	-
ರಾಜ್ಯ ವಲಯ	-	25.00	40.00
ಒಟ್ಟು ಲಕ್ಷಗಳಲ್ಲಿ	**1184.43**	**227.56**	**196.19**

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿ ವಿವರ	ಮೊತ್ತ
	2018-19ನೇ ಸಾಲು	
1.	ಜಿಲ್ಲಾ ಕ್ರೀಡಾಂಗಣದ ಗೇಟ್‌ಗಳ ಅಭಿವೃದ್ಧಿ, ಗಾರ್ಡನ್ ಅಭಿವೃದ್ಧಿ, ಶೌಚಾಲಯ ನಿರ್ಮಾಣ, ಒಳಾಂಗಣ ಕ್ರೀಡಾಂಗಣ ಕಾಂಪೌಂಡು ಗೋಡೆ ಎತ್ತರಿಸುವುದು.	13.35
	ವಿಶೇಷ ಘಟಕ ಯೋಜನೆ ಅಡಿಯಲ್ಲಿ (ಕೆ.ಬಿ.ಜೆ.ಎನ್.ಎಲ್) ರೂ. 10.00 ಕೋಟಿಗಳಅಡಿಯಲ್ಲಿ	
2.	400ಮೀ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್	500.00
3.	ಸಿಂಥೆಟಿಕ್ 2 ವಾಲಿಬಾಲ್ ಅಂಕಣಗಳು	50.00
4.	ಈಜುಕೊಳನಿರ್ಮಾಣ	220.00
5.	ಒಳಾಂಗಣ ಕ್ರೀಡಾಂಗಣ.	200.00
6.	ಗೋಡೆ ನಿರ್ಮಿಸಿ ಚೈನ್ ಲಿಂಕಿಂಗ್ ಫೆನ್ಸಿಂಗ್ ನಿರ್ಮಾಣ	20.00
7.	ಡಾ|| ಬಿ.ಆರ್. ಅಂಬೇಡ್ಕರ್ ಪುತ್ಥಳಿ ಅನಾವರಣ.	10.00
	2019-20ನೇ ಸಾಲು	
1.	ಜಿಲ್ಲಾ ಕ್ರೀಡಾಂಗಣದ ವಿವಿಧ ಕಾಮಗಾರಿ.	16.66
2.	ಇಂಡಿ ತಾಲ್ಲೂಕು ಕ್ರೀಡಾಂಗಣಕ್ಕೆ ಹೈಮಾಸ್ಟ್‌ಲೈಟ್ ಅಳವಡಿಕೆ.	4.20
3.	ಕ್ರೀಡಾಶಾಲೆ/ನಿಲಯದ ಬಾಸ್ಕೆಟ್ ಬಾಲ್ ಮೈದಾನಕ್ಕೆ ಚೈನ್ ಲಿಂಕಿಂಗ್ ನಿರ್ಮಾಣ	9.33
4.	ಇಂಡಿ ತಾಲ್ಲೂಕು ಕ್ರೀಡಾಂಗಣ ಕಾಂಪೌಂಡು ಗೋಡೆ ನಿರ್ಮಾಣ	25.00

<table>
<tr>
<td></td>
<td></td>
<td>
<table>
<tr><td></td><td>2020-21ನೇ ಸಾಲು</td><td></td></tr>
<tr><td>1.</td><td>ಜಿಲ್ಲಾ ಕ್ರೀಡಾ ವಸತಿ ನಿಲಯದ ಪಶ್ಚಿಮ ಹಾಗೂ ಉತ್ತರ ದಿಕ್ಕಿನ ಕಾಂಪೌಂಡು ಗೋಡೆ ಎತ್ತರಿಸುವುದು.</td><td>19.00</td></tr>
<tr><td>2.</td><td>ಜಿಲ್ಲಾ ಕ್ರೀಡಾ ವಸತಿ ನಿಲಯದ ಮೊದಲನೇ ಮಹಡಿಯಲ್ಲಿ ದಾಸ್ತಾನು ಕೋಣೆ ನಿರ್ಮಾಣ</td><td>12.00</td></tr>
<tr><td>3.</td><td>ಜಿಲ್ಲಾ ಕ್ರೀಡಾಂಗಣದ ವಾಲಿಬಾಲ್ ಆವರಣದಲ್ಲಿ ಬಾಲ್ರೂಂ ನಿರ್ಮಾಣ.</td><td>4.00</td></tr>
<tr><td>4.</td><td>ವಿಜಯಪುರ ಜಿಲ್ಲಾ ಕೇಂದ್ರದಲ್ಲಿ ಮಹಿಳಾ ಕ್ರೀಡಾಪಟುಗಳ ವಸತಿ ನಿಲಯ ನಿರ್ಮಾಣ.</td><td>40.00</td></tr>
</table>
</td>
</tr>
<tr>
<td>ಆ)</td>
<td>ವಿಜಯಪುರ ನಗರದ ಭೂತನಾಳ ಗ್ರಾಮದ ಹತ್ತಿರ ನಿರ್ಮಾಣ ಮಾಡಲು ಉದ್ದೇಶಿಸಿರುವ ಸೈಕ್ಲಿಂಗ್ ವೆಲೋಡ್ರುಮ್ (Cycling Velodrome) ಕಾಮಗಾರಿಯು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾಮಗಾರಿಯನ್ನು ಪುನಃ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ ಕಾಮಗಾರಿಗೆ ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು;</td>
<td>ಬಂದಿದೆ.

ಕಾಮಗಾರಿಯನ್ನು ಪುನಃ ಪ್ರಾರಂಭಿಸಿ, ಆರು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ದಿನಾಂಕ:09-03-2021ರಲ್ಲಿ ಸರ್ಕಾರವು ಅನುಮತಿ ನೀಡಿರುತ್ತದೆ.

ಈ ಕಾಮಗಾರಿಗೆ ರೂ.735.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.</td>
</tr>
<tr>
<td>ಇ)</td>
<td>ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಯಲ್ಲಿ ಭಾಗವಹಿಸಲು ಕ್ರೀಡಾ ಇಲಾಖೆ ರೂಪಿಸಿರುವ ಮಾನ ದಂಡಗಳೇನು;</td>
<td>ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು ಆಯೋಜಿಸುವ ಜಿಲ್ಲಾ ಹಂತದ ಕ್ರೀಡಾ ಕೂಟಗಳಲ್ಲಿ ಸಾಧನೆ ತೋರಿದಲ್ಲಿ ಅಥವಾ ಆಯ್ಕೆ ಶಿಬಿರಗಳಲ್ಲಿ ಸಾಧನೆ ತೋರಿದಲ್ಲಿ ಅಂತಹ ಕ್ರೀಡಾಪಟುಗಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಅರ್ಹರಾಗುವರು.</td>
</tr>
<tr>
<td>ಈ)</td>
<td>ಚಡಚಣ ಹೊಸ ತಾಲ್ಲೂಕಾಗಿ ರಚನೆಯಾಗಿರುವುದರಿಂದ ಚಡಚಣ ಕೇಂದ್ರ ಸ್ಥಾನದಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣ ರಚನೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ; ಪ್ರಸ್ತಾವನೆ ಬಂದಿದ್ದಲ್ಲಿ, ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;</td>
<td>ಚಡಚಣ ಹೊಸ ತಾಲ್ಲೂಕಾಗಿ ರಚನೆಯಾಗಿರುವುದರಿಂದ ಚಡಚಣ ಕೇಂದ್ರ ಸ್ಥಾನದಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣವನ್ನು ನಿರ್ಮಿಸಲು ಅವಶ್ಯವಿರುವ ಸೂಕ್ತ ನಿವೇಶನವನ್ನು ಗುರುತಿಸಿ, ನಿಯಮಾನುಸಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸುವಂತೆ ಜಿಲ್ಲಾಧಿಕಾರಿ, ವಿಜಯಪುರ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ. ಸೂಕ್ತ ನಿವೇಶನ ಗುರುತಿಸಿ, ಇಲಾಖೆಗೆ ಮಂಜೂರು ಮಾಡಿ, ಹಸ್ತಾಂತರಿಸಿದ ನಂತರ ಅನುದಾನದ ಲಭ್ಯತೆ ಆಧರಿಸಿ, ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಪರಿಶೀಲಿಸಲಾಗುವುದು.</td>
</tr>
<tr>
<td>ಉ)</td>
<td>ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಭಾಗವಹಿಸುವ ಕ್ರೀಡಾ ಪಟುಗಳಿಗೆ ಸರ್ಕಾರದಿಂದ ನೀಡಲಾಗುವ ಸೌಲಭ್ಯಗಳೇನು;</td>
<td>ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಸರ್ಕಾರದಿಂದ ವಿದ್ಯಾರ್ಥಿವೇತನ, ಶೈಕ್ಷಣಿಕ ಶುಲ್ಕ ಮರುಪಾವತಿ ಮತ್ತು ನಗದು ಬಹುಮಾನ, ಪ್ರಯಾಣಭತ್ಯೆ/ದಿನಭತ್ಯೆ, ಕ್ರೀಡಾಗಂಟು ಹಾಗೂ ವೃತ್ತಿಪರ ಕೋರ್ಸ್ ಗಳಿಗೆ ಕ್ರೀಡಾ ಕೋಟಾದಡಿ ಪ್ರವೇಶ ನೀಡಲಾಗುತ್ತಿದೆ.</td>
</tr>
</table>

ಊ)	ವಿಜಯಪುರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನ ರಾಜ್ಯ ಮತ್ತು ರಾಷ್ಟ್ರದ ಕ್ರೀಡಾಪಟುಗಳು ಸರ್ಕಾರದ ಸೌಲಭ್ಯ ಪಡೆದಿದ್ದಾರೆ? (ಕ್ರೀಡಾಪಟು ಮತ್ತು ಕ್ರೀಡೆಯ ವಿವರ ನೀಡುವುದು)	ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ವೈಎಸ್‌ಡಿ-ಇಬಿಬಿ/83/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಅನುಬಂಧ

Scholarhsip 2018-19

Sl No	Name	Game	District	Amount
1	Jaishnavi Maa Goodmani	Basket Ball	vijayapura	10000
2	Ankita Rathododa	Skeckling	vijayapura	10000
3	Tanveera Jamadhara	Basket Ball	vijayapura	10000
4	Vinaya Gujamagadi	Basket Ball	vijayapura	10000
5	Shiraz Yaragal	Basket Ball	vijayapura	10000
6	Kavya Ramanaguda Patil	Wushu	vijayapura	10000
7	Srusti B Barakera	Basket Ball	vijayapura	10000
8	Daneshwari B Dolly	Basket Ball	vijayapura	10000
9	Ashwini Rathoda	Basket Ball	vijayapura	10000
10	Megha Bagali	Basket Ball	vijayapura	10000
11	Aishwarya's Sandrimani	Basket Ball	vijayapura	10000
12	Ganesha Shiramagonda	Basket Ball	vijayapura	10000
13	Sai Swaroop	Cricket	vijayapura	10000
14	Prakruthi Bellad	Wushu	vijayapura	10000
15	Shahid Hunasagi	Basket Ball	vijayapura	10000

Schoolership of 2019-20

Sl. No.	Name	Game	District	Amount
1	Ankita Rathod	Cycling	Vijayapura	10000
2	Abhishek Gopichand Chavan	Athletics	Vijayapura	10000
3	Payal Chavan	Cycling	Vijayapura	10000
4	Akshata Ashok Butanala	Cycling	Vijayapura	10000
5	Shabana Shekh	Basket Ball	Vijayapura	10000
6	Raghavendra Vandal	Cycling	Vijayapura	10000
7	Jaishnavi Gudimani	Basket Ball	Vijayapura	10000
8	Aishwarya Ramesh Sandrimani	Basket Ball	Vijayapura	10000
9	Daneshwari B Dolli	Basket Ball	Vijayapura	10000

Feereimbersment of 2018-19

Sl. No.	Name	Game	District	Amount
1	Nandeppa S.Sawadi	Cycling	Vijayapura	1270.00
2	Arathi Baaty	Cycling	Vijayapura	1270.00
3	Soumya Antapur	Cycling	Vijayapura	3170.00
4	Basavaraja Ha Muddy	Cycling	Vijayapura	2709.00

2019-20 FEE REIMBURSMENT

Sl.No	Name	Game	District	Amount (Rs.)
1	Goutam B Hiregoli	Atya-Patya	Vijayapura	9400
2	Arati Bati	Cycling	Vijayapura	1440

CASH AWARD 2018-19

Sl No	Name	Game	District	Amount
1	Arati Bhati	Cycling	Vijayapura	10000
2	Anitha Shinde	Cycling	Vijayapura	25000
3	Santhosh Kurani	Cycling	Vijayapura	25000

4	Renuka Dandin	Cycling	Vijayapura	30000
5	Sahana Kudiganur	Cycling	Vijayapura	35000
6	Krishna Nayakodi	Cycling	Vijayapura	200000
7	Sachin Ranjanagi	Cycling	Vijayapura	25000
8	Mallik Rehan Attar	Cycling	Vijayapura	15000
9	Lakshman Kurani	Cycling	Vijayapura	15000
10	Geetanjali Joteppanavar	Cycling	Vijayapura	50000
11	Shahera Attar	Cycling	Bijapur	50000

Cash Award 2019-20

Sl No	Name	Game	District	Amount
1	Basavaraj Maddi	Cycling	Vijayapura	10000
2	Layappa S Mudhol	Cycling	vijayapura	15000
3	Yalaguresh Gaddi	Cycling	Vijayapura	50000
4	Vishwanath N Gadad	Cycling	Vijayapura	65000

Cash award 2020-21

Sl No	Name	Game	District	Amount	Year
1	Aishwarya S	Basket Ball	Vijayapura	10000	2017
2	Akshata A Bhutanal	Cycling	Vijayapura	10000	2018
3	Ankita Rathod	Cycling	Vijayapura	15000	2017
4	Ankita Rathod	Cycling	Vijayapura	15000	2018
5	Ankita Rathod	Cycling	Vijayapura	25000	2019
6	Ashwini Rathod	Basket Ball	Vijayapura	10000	2017
7	Basavaraj Maddi	Cycling	Vijayapura	75000	2017
8	Danamma K Gurav	Cycling	Vijayapura	40000	2018
9	Jeshtnavi Gudimani	Basket Ball	Vijayapura	10000	2017
10	Kaveri N Muranal	Cycling	Vijayapura	75000	2019
11	Krishna Nayakodi	Cycling	Vijayapura	50000	2017
12	Layappa Siddappa Mudhol	Cycling	Vijayapura	25000	2017
13	Mallikarjun Yadwad	Cycling	Vijayapura	65000	2019
14	Nandeppa S Savadi	Cycling	Vijayapura	30000	2017
15	Pavitra R	Basket Ball	Vijayapura	25000	2017
16	Payal Chavan	Cycling	Vijayapura	15000	2018
17	Pratap Padachi	Cycling	Vijayapura	10000	2018
18	Raghavandra Vandal	Cycling	Vijayapura	10000	2019
19	Sachin Ranjanagi	Cycling	Vijayapura	20000	2017
20	Sahana Kudiganur	Cycling	Vijayapura	100000	2019
21	Sahana S Kudaganur	Cycling	Vijayapura	60000	2017
22	Sahana S Kudiganur	Cycling	Vijayapura	75000	2018
23	Saliya M.M	Basket Ball	Vijayapura	25000	2017
24	Sanju Nayak	Cycling	Vijayapura	50000	2017
25	Santosh Kurani	Cycling	Vijayapura	50000	2017
26	Savithri Hebbalatti	Cycling	Vijayapura	65000	2017

27	shabana Shekh	Basket Ball	Vijayapura	25000	2018
28	Shrusti Baraker	Basket Ball	Vijayapura	10000	2017
29	Soumya Antapur	Cycling	Vijayapura	100000	2019
30	Vishwanath Gadad	Cycling	Vijayapura	30000	2018
31	Yalaguresh Gaddi	Cycling	Vijayapura	100000	2018
32	Yashavant B Biradar	Cycling	Vijayapura	25000	2017

YSD-EBB-83/2021.